ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸ ಪತ್ರಿಕೆ

ಸಂಪುಟ : 5 । ಸಂಚಿಕೆ : 1 । ಜನವರಿ - 2023 । ಪುಟಗಳು : 20 । ಬೆಲೆ : 25/-

ಗತವರ್ಷದ ಮೃತಪಾಪವ ಸುಡು, ತೊರೆ;
ಅಪಜಯ ಅವಮಾನಗಳನು ಬಿಡು; ಮರೆ;
ಕಳಚಲಿ ಬೀಳಲಿ ಬಾಳಿನ ಹಳೆಪೊರೆ,
ನವ ವತ್ಸರವನು ಕೂಗಿ ಕರೆ!
– ಕುವೆಂಪು






## ರಾಜ್ಯದ ಸಮಸ್ತ ಸಹಕಾರಿ ಬಂಧುಗಳಿಗೆ
## 2023ರ ನೂತನ ವರ್ಷ, ಮಕರ ಸಂಕ್ರಾಂತಿ
## ಮತ್ತು ಗಣರಾಜ್ಯೋತ್ಸವದ ಶುಭಾಶಯಗಳು




ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು

ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು







ಆಡಳಿತ ಮಂಡಳಿ ನಿರ್ದೇಶಕರುಗಳು,
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ

# ಪತ್ತಿನ ಮಹಾಮಂಡಳದ 2023ರ ಕ್ಯಾಲೆಂಡರ್ ಬಿಡುಗಡೆ



ಪತ್ತಿನ ಮಹಾಮಂಡಳದ ವತಿಯಿಂದ 2023ನೇ ಸಾಲಿನ ಕ್ಯಾಲೆಂಡರ್‌ಗಳನ್ನು ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ, ಉಪಾಧ್ಯಕ್ಷರಾದ ಶ್ರೀ ಕೆ.ಕೆ. ಮಹೇಂದ್ರಪ್ರಸಾದ್‌ಗೌಡ, ಅಪರ ನಿಬಂಧಕರಾದ ಶ್ರೀ ಪ್ರಕಾಶ್ ರಾವ್, ನಿರ್ದೇಶಕರುಗಳಾದ ಶ್ರೀ ಬಿ.ಡಿ. ಭೂಕಾಂತ ಶ್ರೀ ಡಿ.ಚನ್ನಯ್ಯ ಅವರುಗಳು ಬಿಡುಗಡೆ ಮಾಡಿದರು. ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ) ಶ್ರೀಮತಿ ಆಶಾಲತಾ.ಪಿ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ನಾಗಿನಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯಿಂದ ಕಟ್ಟಡ ದೇಣಿಗೆಯ ಚೆಕ್ ಸಲ್ಲಿಕೆ



ಬೆಂಗಳೂರಿನ ಬಸವೇಶ್ವರನಗರದ ನಾಗಿನಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾದ ಶ್ರೀ ಶಿವರಾಮಯ್ಯ, ಕಾರ್ಯದರ್ಶಿ ಶ್ರೀ ದಿವಾಕರ ಜಿ.ಬಿ. ರವರು ಕಟ್ಟಡ ದೇಣಿಗೆಯ ಚೆಕ್ಕನ್ನು ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ, ಉಪಾಧ್ಯಕ್ಷರಾದ ಶ್ರೀ ಕೆ.ಕೆ. ಮಹೇಂದ್ರಪ್ರಸಾದ್‌ಗೌಡ ಮತ್ತು ನಿರ್ದೇಶಕರಾದ ಶ್ರೀ ಡಿ. ಚನ್ನಯ್ಯರವರಿಗೆ ನೀಡಿದರು.

# ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ನಿರ್ದೇಶಕರಾದ ಡಾ. ಬಿ.ಡಿ. ಭೂಕಾಂತರವರಿಗೆ ವರ್ಷದ ಕನ್ನಡಿಗ–2022 ಪ್ರಶಸ್ತಿ




ಬೆಂಗಳೂರಿನ ಪ್ರತಿಷ್ಠಿತ ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನ(ರಿ)ದ ವತಿಯಿಂದ ಕನ್ನಡ ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಡಿಸೆಂಬರ್–27ರಂದು ಚಾಮರಾಜಪೇಟೆಯ ಕಸಾಪ ಆವರಣದಲ್ಲಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ದಾಸ ಸಾಹಿತ್ಯ ಗಾಯನ, ಭರತ ನಾಟ್ಯ, ನಾಟಕ ಪ್ರದರ್ಶನ ಹಾಗೂ ಸಾಧಕರಿಗೆ ಪ್ರಶಸ್ತಿ ಪ್ರಧಾನ ಕಾರ್ಯಕ್ರಮದಲ್ಲಿ ಹಿರಿಯ ಸಹಕಾರಿ ಧುರೀಣ, ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ನಿರ್ದೇಶಕರಾದ ಡಾ. ಬಿ.ಡಿ. ಭೂಕಾಂತರವರಿಗೆ ವರ್ಷದ ಕನ್ನಡಿಗ–2022 ಪ್ರಶಸ್ತಿ ನೀಡಿ ಗೌರವಿಸಲಾಯಿತು.


## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988,

ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org

ವೆಬ್‌ಸೈಟ್ : www.ksccsf.org

## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

– **ಸಂಪಾದಕರು**

## ಸಂಪಾದಕೀಯ



**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**
ಅಧ್ಯಕ್ಷರು

**ಸಹಕಾರ ಸಂಘಗಳ ಆಡಳಿತ ಮಂಡಳಿ ಸದಸ್ಯರು ಅಧಿಕಾರಿ ಸಿಬ್ಬಂದಿ ವರ್ಗ ಸದಸ್ಯರು, ಗ್ರಾಹಕರು ತಮ್ಮ ಕುಟುಂಬಗಳ ಆರೋಗ್ಯ ರಕ್ಷಣೆಗೆ ಹೆಚ್ಚಿನ ಒತ್ತು ನೀಡಬೇಕಾಗುತ್ತದೆ. 2023ರ ನೂತನ ವರ್ಷಕ್ಕೆ ನಾವೆಲ್ಲರೂ ಕಾಲಿರಿಸಿದ್ದೇವೆ. ಮೊದಲಿಗೆ ನಮ್ಮ ಕುಟುಂಬಗಳ ಸದಸ್ಯರ ಆರೋಗ್ಯ ರಕ್ಷಣೆ, ಉತ್ತಮ ಜೀವನಕ್ಕೆ ಆದ್ಯತೆ ನೀಡಿ, ಸಹಕಾರ ಸಂಘಗಳಲ್ಲಿ ಲಭ್ಯವಿರುವ ಸೇವೆಗಳನ್ನು ಪಡೆದು-ಸ್ವಾವಲಂಬನೆ ಸಾಧಿಸಿಕೊಳ್ಳಬೇಕಾಗಿದೆ.**

# 2023ರ ಹೊಸ ವರ್ಷ
# "ಸಹಕಾರದಿಂದ ಸಮೃದ್ಧಿ" - ನಮ್ಮ ಸಂಕಲ್ಪ

ದೇಶದ ಆರ್ಥಿಕ ಅಭಿವೃದ್ಧಿಗೆ ಸಹಕಾರ ಕ್ಷೇತ್ರ ತನ್ನದೇ ಆದ ಕೊಡುಗೆ ನೀಡುತ್ತಾ ಬಂದಿದೆ. ಸದಸ್ಯ-ಗ್ರಾಹಕರ ಸೇವೆಗಳ ಮೂಲಕ ಆರ್ಥಿಕ ಸ್ವಾವಲಂಬನೆಗೆ ನೆರವಾಗುತ್ತಾ ವ್ಯವಹಾರ ವೃದ್ಧಿ-ಉದ್ಯೋಗ ಸೃಷ್ಠಿ ಮೂಲಕ ಸಹಕಾರ ಕ್ಷೇತ್ರವು ಬೃಹದಾಕಾರವಾಗಿ ಬೆಳೆಯುತ್ತಾ ಸಾಗಿದೆ.

ಕಳೆದ ಎರಡು ವರ್ಷಗಳ ಹಿಂದೆ ಕೊರೊನಾ ಮಹಾಮಾರಿಯಿಂದ ಸಹಕಾರ ಸಂಘಗಳು ಹಲವು ಸವಾಲುಗಳನ್ನು ಎದುರಿಸಿ ಮುನ್ನಡೆಯುತ್ತಿವೆ. 2022-23ರ ಆರ್ಥಿಕ ವರ್ಷದಲ್ಲಿ ಉತ್ತಮ ಪ್ರಗತಿ ಕಾಣಬಹುದು ಎಂದು ನಿರೀಕ್ಷಿಸಲಾಗಿದೆ. ಈ ನಿಟ್ಟಿನಲ್ಲಿ ಸಹಕಾರ ಸಂಘಗಳ ಆಡಳಿತ ಮಂಡಳಿ ಸದಸ್ಯರು, ಅಧಿಕಾರಿ ಸಿಬ್ಬಂದಿ ವರ್ಗ, ಸದಸ್ಯರು ಹಾಗೂ ಗ್ರಾಹಕರು ತಮ್ಮ ಕುಟುಂಬಗಳ ಆರೋಗ್ಯ ರಕ್ಷಣೆಗೆ ಹೆಚ್ಚಿನ ಒತ್ತು ನೀಡಬೇಕಾಗುತ್ತದೆ.

2023ರ ನೂತನ ವರ್ಷಕ್ಕೆ ನಾವೆಲ್ಲರೂ ಕಾಲಿರಿಸಿದ್ದೇವೆ. ಮೊದಲಿಗೆ ನಮ್ಮ ಕುಟುಂಬಗಳ ಸದಸ್ಯರ ಆರೋಗ್ಯ ರಕ್ಷಣೆ, ಉತ್ತಮ ಜೀವನಕ್ಕೆ ಆದ್ಯತೆ ನೀಡಿ, ಸಹಕಾರ ಸಂಘಗಳಲ್ಲಿ ಲಭ್ಯವಿರುವ ಸೇವೆಗಳನ್ನು ಪಡೆದು-ಸ್ವಾವಲಂಬನೆ ಸಾಧಿಸಿಕೊಳ್ಳಬೇಕಾಗಿದೆ.

"ಸಹಕಾರದಿಂದ ಸಮೃದ್ಧಿ" ಎಂಬ ಸಂಕಲ್ಪದೊಂದಿಗೆ ನಾವೆಲ್ಲರೂ ನಮಗೆ ವಿವಿಧ ರೀತಿಯಲ್ಲಿ ನೆರವಾಗುತ್ತಿರುವ ಸಹಕಾರ ಸಂಘಗಳ ಅಭಿವೃದ್ಧಿಗೆ ಕಾರಣ ಕರ್ತರಾಗುವ ಜೊತೆಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳೋಣ.

2023ರ ವರ್ಷದಲ್ಲಿ ವಿಶೇಷವಾಗಿ ಪತ್ತಿನ ಸಹಕಾರ ಚಳವಳಿಯನ್ನು ಬೆಳೆಸುವ ಕಾರ್ಯದಲ್ಲಿ ತೊಡಗಿಸಿಕೊಂಡು ಆರ್ಥಿಕ ಅಗತ್ಯಗಳಿರುವ ಜನರನ್ನು ಸಹಕಾರ ಕಕ್ಷೆಗೆ ಸೇರ್ಪಡೆ ಮಾಡಿ ಚಳುವಳಿಯನ್ನು ಪರಿಣಾಮಕಾರಿಗೊಳಿಸೋಣ.

2023ರ ವರ್ಷ ಪತ್ತಿನ ಸಹಕಾರ ಸಂಘಗಳ ಮಹಾಮಂಡಳಕ್ಕೆ ಹರ್ಷದಾಯಕ ವರ್ಷವಾಗಿದೆ. ಪತ್ತಿನ ಸಹಕಾರ ಮಹಾಮಂಡಳವು ಬೆಂಗಳೂರಿನ ನಂದಿನಿ ಬಡಾವಣೆಯಲ್ಲಿ ನಿಮ್ಮೆಲ್ಲರ ಸಹಕಾರದಿಂದ ನಿರ್ಮಾಣ ಮಾಡಿರುವ ಸುಸಜ್ಜಿತ ಆಡಳಿತ ಕಚೇರಿಯ ಉದ್ಘಾಟನೆಯೂ ನೆರವೇರಲಿದೆ. ನಿಮ್ಮ ಶುಭ ನುಡಿಗಳು ನಮಗೆ ಪ್ರೇರಣೆಯಾಗಲಿದೆ. ಹೊಸ ವರ್ಷಕ್ಕೆ ತಮೆಲ್ಲರಿಗೂ ಪತ್ತಿನ ಮಹಾಮಂಡಳದ ಆಡಳಿತ ಮಂಡಳಿ ಪರವಾಗಿ ಶುಭ ಕೋರುತ್ತೇನೆ. ಹೊಸ ವರ್ಷವನ್ನು ನಮ್ಮ ಕನಸುಗಳನ್ನು ನನಸಾಗಿಕೊಳ್ಳುವ ಮೂಲಕ "ಸಹಕಾರದಿಂದ ಸಮೃದ್ಧಿ" ಕಾಣೋಣ ಎಂದು ಆಶಿಸುತ್ತಾ ಮತ್ತೊಮ್ಮೆ ಶುಭಾಶಯಗಳನ್ನು ಸಲ್ಲಿಸುತ್ತೇನೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಕಾರ್ಯನಿರ್ವಾಹಕ ಸಂಪಾದಕರು:
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು :
**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

# ಹಣದುಬ್ಬರ, ಆರ್ಥಿಕ ಹಿಂಜರಿತದ ಹೊರತಾಗಿಯೂ ಬ್ಯಾಂಕ್ ಸಾಲಕ್ಕೆ ಹೆಚ್ಚುತ್ತಿದೆ ಬೇಡಿಕೆ

**ಹೊಸದಿಲ್ಲಿ :** 2023ರಲ್ಲಿ ದೇಶದ ರಾಷ್ಟ್ರೀಕೃತ ಮತ್ತು ಖಾಸಗಿ ವಲಯದ ಬ್ಯಾಂಕುಗಳಿಗೆ ಶುಕ್ರದೆಸೆ ಆರಂಭವಾಗಲಿದೆ ಎಂಬ ವರದಿ ಹೊರಬಿದ್ದಿದೆ. ವಾರದ ಆರಂಭದಲ್ಲಿ ಬಿಡುಗಡೆಗೊಂಡಿದ್ದ ಭಾರತೀಯ ರಿಸರ್ವ್‌ಬ್ಯಾಂಕ್‌ನ ವರದಿಯಲ್ಲಿ 2021–2022ರಲ್ಲಿ ದೇಶದ ಬ್ಯಾಂಕುಗಳ ಸ್ಥಿತಿ ಸುಧಾರಿಸಿದೆ ಎಂದು ಹೇಳಿದ ಬೆನ್ನಲ್ಲೇ ಈ ವರದಿ ಹೊಸ ಭರವಸೆ ಮೂಡಿಸಿದೆ. ಹಣದುಬ್ಬರ ನಿಯಂತ್ರಣದ ದೃಷ್ಟಿಯಿಂದ ಭಾರತೀಯ ರಿಸರ್ವ್‌ಬ್ಯಾಂಕ್‌ಸತತ ಬಡ್ಡಿ ದರ ಹೆಚ್ಚಳ ಪ್ರಕಟಿಸಿದ್ದು, ಆರ್ಥಿಕ ಹಿಂಜರಿತದ ಭೀತಿ ಎದುರಾಗಿದೆ. ಇದರಿಂದ ವ್ಯಾಪಾರ ವಹಿವಾಟಿನ ಮೇಲೆ ಪರಿಣಾಮ ಬೀರಲಿದೆ ಎಂಬ ಆತಂಕದ ನಡುವೆಯೂ ಬ್ಯಾಂಕುಗಳ ಸಾಲದ ಹಂಚಿಕೆ ಪ್ರಮಾಣ ತೀವ್ರ ಏರುಗತಿಯಲ್ಲಿ ಇರುವುದರಿಂದ ಹಾಗೂ ಹೊಸ ಸಾಲಗಳಿಗೆ ಗ್ರಾಹಕರು ಆಸಕ್ತಿ ಉಳಿಸಿಕೊಂಡಿರುವುದು ಬ್ಯಾಂಕುಗಳ ಮೇಲಿನ ವಿಶ್ವಾಸಾರ್ಹತೆ ಹೆಚ್ಚಿಸಿದೆ. ಹೀಗಾಗಿ ಮುಂದಿನ ವರ್ಷ ಬ್ಯಾಂಕುಗಳ ಹೆಚ್ಚು ಲಾಭ ಗಳಿಸಲಿವೆ ಎಂದು ತಜ್ಞರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಕೃತ ಬ್ಯಾಂಕ್‌ಗಳು ಸಾಲದ ವಸೂಲಾತಿಯಲ್ಲಿ ತೋರಿದ ಪ್ರಗತಿಯಿಂದ ಅನುಪಯುಕ್ತ ಸ್ವತ್ತಿನ ಪ್ರಮಾಣ ತಗ್ಗುತ್ತಿದೆ. ಇದರಿಂದ ಪ್ರಸಕ್ತ ಹಣಕಾಸು ವರ್ಷದ ಅವಧಿಯಲ್ಲಿ ಬ್ಯಾಂಕುಗಳು ಉತ್ತಮ ಲಾಭವನ್ನು ಕಾಣಲಿದ್ದು, ಈ ಟ್ರೆಂಡ್ 2023ರಲ್ಲೂ ಮುಂದುವರಿಯಲಿದೆ.

ಖಾಸಗಿ ವಲಯದ ಬ್ಯಾಂಕುಗಳಲ್ಲೂ ಆಹ್ಲಾದಕರ ವಾತಾವರಣವಿದ್ದು, ಎಚ್‌ಡಿಎಫ್‌ಸಿ ಲಿಮಿಟೆಡ್ ಈಗಾಗಲೇ ಎಚ್‌ಡಿಎಫ್‌ಸಿ ಬ್ಯಾಂಕ್ ಜತೆ ವಿಲೀನಕ್ಕೆ ನಿರ್ಧರಿಸಿದೆ. ಅಲ್ಲದೇ ಜಾಗತಿಕ ರಿಟೇಲ್ ದೈತ್ಯ ಸಿಟಿ ಬ್ಯಾಂಕ್ ಖರೀದಿಸುವುದಾಗಿ ಆಕ್ಸಿಸ್ ಬ್ಯಾಂಕ್ ಘೋಷಿಸಿದೆ.

ಈ ಎರಡು ಪ್ರಮುಖ ವ್ಯವಹಾರಗಳು 2023ರಲ್ಲಿ ಪೂರ್ಣಗೊಳ್ಳಲಿವೆ ಎಂದು ನಿರೀಕ್ಷಿಸಲಾಗಿದೆ. "ಭಾರತೀಯ ರಿಸರ್ವ್ ಬ್ಯಾಂಕ್ ಮತ್ತೊಂದು ಬಾರಿ ರೆಪೋ ದರ ಹೆಚ್ಚಳಕ್ಕೆ ಮುಂದಾಗಲಿದ್ದು, ಸದ್ಯದ ಬಡ್ಡಿ ದರ ಶೇ. 6.25 ರಿಂದ ಶೇ. 6.50ಕ್ಕೆ ಹೆಚ್ಚಳ ಮಾಡುವ ನಿರೀಕ್ಷೆ ಇದೆ. ಇದರಿಂದ ಬರುವ ಮೇ ಹೊತ್ತಿಗೆ ಬ್ಯಾಂಕುಗಳ ಬಡ್ಡಿದರ ಹಾಗೂ ಸಾಲದ ಮೊತ್ತ ಹೆಚ್ಚಳವಾಗಲಿದ್ದು, ಅದರಿಂದ ಲಾಭವೂ ಅಧಿಕವಾಗಲಿದೆ," ಎಂದು ಕೊಟ್ಯಾಕ್ ಮಹಿಂದ್ರಾ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಉದಯ್ ಕೊಟ್ಯಾಕ್ ಅಭಿಪ್ರಾಯಪಟ್ಟಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿ 12 ಸಾರ್ವಜನಿಕ ವಲಯದ ಬ್ಯಾಂಕುಗಳು ಒಟ್ಟು ಮಾರುಕಟ್ಟೆ ವ್ಯವಹಾರದ ಶೇ.60 ಪಾಲು ಹೊಂದಿದ್ದು, ಶೇ. 32ರ ಬೆಳವಣಿಗೆಯೊಂದಿಗೆ ಒಟ್ಟು 40,991 ಕೋಟಿ ರೂ.ಗಳ ನಿವ್ವಳ ಲಾಭ ಗಳಿಸಿವೆ. ಸೆಪ್ಟೆಂಬರ್‌ತಿಂಗಳಿನಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳು ಶೇ. 50ರಷ್ಟು ಬೆಳವಣಿಗೆ ಸಾಧಿಸಿ, ಒಟ್ಟು 25,685 ಕೋಟಿ ರೂ.ಗಳ ಲಾಭ ಗಳಿಸಿವೆ. ಜೂನ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಶೇ. 76.8ರ ಲಾಭದ ಹೆಚ್ಚಳದಿಂದ 15,307 ಕೋಟಿ ರೂ.ಗಳನ್ನು ಗಳಿಸಿದ್ದವು.

**ಸುಭಾಷಿತ :** ಟೀಕೆಗಳು ಸಾಯುತ್ತವೆ. ಕೆಲಸಗಳು ಉಳಿಯುತ್ತವೆ. ಬಹುಜನರು ಹೇಳಿದ ಮಾತ್ರಕ್ಕೆ ಸುಳ್ಳು ನಿಜವಾಗುವುದಿಲ್ಲ. – ಕುವೆಂಪು

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಸಹಕಾರ ರಂಗ ಸದೃಢಗೊಳಿಸಲು ಸಮಗ್ರ ನೀತಿ

## ನಗರದಲ್ಲಿ ಸಹಕಾರ ಫಲಾನುಭವಿಗಳ ಸಮಾವೇಶ ಉದ್ದೇಶಿಸಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಭರವಸೆ



**ಬೆಂಗಳೂರು :** ಸಹಕಾರ ರಂಗದ ಎಲ್ಲ ವಲಯವನ್ನು ಒಂದೇ ಸೂರಿನಡಿ ತಂದು ಮತ್ತಷ್ಟು ಸದೃಢಗೊಳಿಸಲು ಸಮಗ್ರ ಸಹಕಾರ ನೀತಿ ರೂಪಿಸಲಾಗುತ್ತಿದೆ ಎಂದು ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಹೇಳಿದರು.

ನಗರದಲ್ಲಿ ಡಿ. 30ರಂದು ಸಹಕಾರ ಇಲಾಖೆ ಆಯೋಜಿಸಿದ್ದ ಸಹಕಾರ ಫಲಾನುಭವಿಗಳ ಸಮಾವೇಶ ಉದ್ದೇಶಿಸಿ ಭಾಷಣ ಮಾಡಿದ ಅವರು, ಹೊಸ ನೀತಿ ರೂಪಿಸಲು ಈಗಾಗಲೇ ಮಾಜಿ ಕೇಂದ್ರ ಸಚಿವ ಸುರೇಶ್ ಪ್ರಭು ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದ್ದು, ಅದು ದತ್ತಾಂಶ ಸಂಗ್ರಹ ಕಾರ್ಯದಲ್ಲಿ ತೊಡಗಿದೆ ಎಂದರು.

ಅಲ್ಲದೆ, ಸಹಕಾರಿ ಸಂಘಗಳ ಚುನಾವಣೆ ಸಂಬಂಧ ಮಾದರಿ ಕಾಯಿದೆಯನ್ನು ರೂಪಿಸಿದ್ದು, ಅದರ ಪ್ರತಿಯನ್ನು ಎಲ್ಲ ರಾಜ್ಯಗಳಿಗೂ ಕಳುಹಿಸಿ ಅಭಿಪ್ರಾಯ ಸಂಗ್ರಹಿಸಲಾಗುತ್ತಿದೆ. ಅಂತೆಯೇ, ಸಹಕಾರ ಸಂಘದ ನಿಯಮಗಳ ನಿಬಂಧನೆಗಳ ಬಗ್ಗೆ ಅಧಿನಿಯಮಗಳನ್ನು ರೂಪಿಸಲಾಗಿದ್ದು, ಅದು ಸ್ಥಾಯಿ ಸಮಿತಿಯ ಪರಿಶೀಲನೆಯಲ್ಲಿದೆ





ಎಂದು ಸಚಿವರು ಹೇಳಿದರು.

**2 ಲಕ್ಷ ಸಹಕಾರ ಸಮಿತಿ ರಚನೆ :** ಸಹಕಾರ ರಂಗದ ಎಲ್ಲ ವಲಯಗಳನ್ನೂ ಒಳಗೊಂಡಂತೆ ಎಲ್ಲ ಪಂಚಾಯಿತಿಗಳಲ್ಲಿ ಸಹಕಾರ ಸಮಿತಿಗಳನ್ನು ರಚಿಸಲಾಗುವುದು. ಮುಂದಿನ ಮೂರು ವರ್ಷಗಳಲ್ಲಿ ಎರಡು ಲಕ್ಷ ಸಹಕಾರ ಸಮಿತಿಗಳನ್ನು ರಚಿಸುವ ಗುರಿ ಹೊಂದಲಾಗಿದೆ. ಈ ಸಮಿತಿಗಳು ಗ್ರಾಮಗಳಲ್ಲಿ ಅನಿಲ, ನೀರು ವಿತರಣೆ ಸೇರಿ ಎಲ್ಲ ಚಟುವಟಿಕೆಗಳನ್ನು ನಿಭಾಯಿಸಲಿದೆ ಎಂದು ಹೇಳಿದರು.

ಸಹಕಾರಿ ವಿವಿ ಸ್ಥಾಪನೆ : ಅಮೂಲ್ ಮಾದರಿಯಲ್ಲಿ ಸಹಕಾರ ವಲಯದಲ್ಲಿ ಮಲ್ಟಿ ಸ್ಟೇಟ್ ಕೋ-ಆಪರೇಟಿವ್ ಒಕ್ಕೂಟಗಳನ್ನು ರಚಿಸಲಾಗುವುದು. ಬೀಜ ಉತ್ಪಾದನೆಯಲ್ಲೂ ಬಹುರಾಜ್ಯ ಸಹಕಾರಿ ಯೂನಿಯನ್‌ಗಳನ್ನು ರಚನೆ ಮಾಡಲಾಗುವುದು. ಸಹಕಾರಿ ವಲಯದ ವಸ್ತುಗಳ ಉತ್ಪಾದನೆಗೆ ಎಕ್ಸ್‌ಪೋರ್ಟ್ ಹೌಸ್ ರಚಿಸಲಾಗುವುದು, ಸಹಕಾರಿ ವಲಯದ ಬಲವರ್ಧನೆಗೆ ವಿಶ್ವವಿದ್ಯಾಲಯ ಸ್ಥಾಪಿಸಲಾಗುವುದು ಎಂದು ಅಮಿತ್ ಶಾ ಹೇಳಿದರು.

ಕರ್ನಾಟಕದಲ್ಲಿ ಸಹಕಾರಿ ಆಂದೋಲನಕ್ಕೆ ಶತಮಾನಕ್ಕೂ ಮಿಗಿಲಾದ ಇತಿಹಾಸವಿದೆ. ಗದಗ ಜಿಲ್ಲೆಯಲ್ಲಿ ದೇಶದ ಮೊದಲ ಸಹಕಾರಿ ಸಂಘ ಆರಂಭವಾಯಿತು. ಎಂದು ಸ್ಮರಿಸಿದ ಅವರು, ಆ ನಂತರ ಸಹಕಾರಿ ಸಂಘಗಳು ದೇಶಾದ್ಯಂತ ವ್ಯಾಪಿಸಿದವು. ವಿಶ್ವದ 30 ಲಕ್ಷ ಸಹಕಾರಿ ಸಂಸ್ಥೆಗಳಲ್ಲಿ 9 ಲಕ್ಷ ಭಾರತದಲ್ಲಿಯೇ ಇವೆ. ಕೆಎಂಎಫ್ ಇಡೀ ದೇಶಕ್ಕೆ ಮಾದರಿ ಸಂಸ್ಥೆಯಾಗಿದ್ದು, ಪ್ರತಿ ದಿನ ಬಹುತೇಕ ಮಹಿಳೆಯರು ಸೇರಿ 33 ಲಕ್ಷ ರೈತರ ಬ್ಯಾಂಕ್ ಖಾತೆಗಳಿಗೆ 28 ಕೋಟಿ ರೂ. ಡಿಬಿಟಿ ಮೂಲಕ ಜಮೆಯಾಗುತ್ತಿದೆ. ದೇಶದ ಶೇ.51ರಷ್ಟು ಜನಸಂಖ್ಯೆ ಒಂದಲ್ಲಾ ಒಂದು ರೀತಿಯಲ್ಲಿ ಸಹಕಾರ ವಲಯದಲ್ಲಿ ತೊಡಗಿಸಿಕೊಂಡು ಅದರ ಲಾಭವನ್ನು ಪಡೆಯುತ್ತಿದೆ ಎಂದರು.

ಕೃಷಿ ಹಣಕಾಸು ವಲಯದಲ್ಲಿ ಶೇ.19, ರಸಗೊಬ್ಬರ ವಲಯದಲ್ಲಿ ಶೇ. 30, ಸಕ್ಕರೆ ವಲಯದಲ್ಲಿ ಶೇ. 4ರಷ್ಟು ಭತ್ತ ಬೆಳೆಯುವಲ್ಲಿ ಶೇ.20 ಮತ್ತು ಗೋಧಿಯನ್ನು ಶೇ. 13ರಷ್ಟು ಸಹಕಾರಿ ರಂಗದ ಹಿಡಿತದಲ್ಲಿದೆ. ಸಹಕಾರಿ ವಲಯದಲ್ಲಿನ ಅತ್ಯುತ್ತಮ ಪದ್ಧತಿಗಳನ್ನೆಲ್ಲಾ ಒಗ್ಗೂಡಿಸಿ ಅವುಗಳನ್ನು ರಾಜ್ಯಗಳ ನಡುವೆ ವಿನಿಮಯ ಮಾಡಿಕೊಳ್ಳಬೇಕು, ಎಂದ ಅವರು, ಕರ್ನಾಟಕದ ಸಹಕಾರಿ ಸಂಘಗಳ ಸಾಧನೆ ಇಡೀ ದೇಶಕ್ಕೆ ಮಾದರಿಯಾಗಿದೆ ಎಂದು ಶ್ಲಾಘಿಸಿದರು.

ಕೇಂದ್ರ ಸಚಿವ ಪ್ರಲ್ಹಾದ್ ಜೋಷಿ, ಸಚಿವರಾದ ಆರಗ ಜ್ಞಾನೇಂದ್ರ ಡಾ. ಸಿ.ಎನ್. ಅಶ್ವತ್ಥನಾರಾಯಣ, ಆರ್. ಅಶೋಕ್, ಎಂ.ಟಿ.ಬಿ. ನಾಗರಾಜು, ಸಂಸದ ಪಿ.ಸಿ. ಮೋಹನ್, ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್, ಸಹಕಾರ ಸಂಘಗಳ ನಿಬಂಧಕರಾದ ಕ್ಯಾಪ್ಟನ್ ಡಾ. ಕೆ. ರಾಜೇಂದ್ರ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇದೇ ವೇಳೆ ಸಹಕಾರ ಇಲಾಖೆಯ ನಾನಾ ಫಲಾನುಭವಿಗಳಿಗೆ ಯಶಸ್ವಿನಿ ಕಾರ್ಡ್, ಸಾಲದ ಚೆಕ್ ಮತ್ತು ಪ್ರಶಂಸನಾ ಪತ್ರಗಳನ್ನು ವಿತರಿಸಲಾಯಿತು.

## ಜ. 1 ರಿಂದ ಯಶಸ್ವಿನಿ ಯೋಜನೆ ಜಾರಿ

ರೈತರು ಸೇರಿದಂತೆ ಸಹಕಾರಿ ರಂಗದಲ್ಲಿ ತೊಡಗಿರುವವರ ಆರೋಗ್ಯ ರಕ್ಷಣೆಗೆ ಸರ್ಕಾರ ಮರು ಜಾರಿಗೊಳಿಸಿರುವ ಯಶಸ್ವಿನಿ ಯೋಜನೆ ಅಡಿ ಜ. 1 ರಿಂದ ರಾಜ್ಯದ 460 ಆಸ್ಪತ್ರೆಗಳಲ್ಲಿ ಚಿಕಿತ್ಸೆ ಲಭ್ಯವಾಗಲಿದೆ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು. ಇಲಾಖೆ 30 ಲಕ್ಷ ಸಹಕಾರಿಗಳನ್ನು ಯಶಸ್ವಿನಿ ಯೋಜನೆಯಡಿ ನೋಂದಣಿ ಮಾಡುವ ಗುರಿ ಹೊಂದಿತ್ತು. ಈಗಾಗಲೇ 21 ಲಕ್ಷ ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಅವರಿಗೆಲ್ಲಾ ಆಯುಷ್ಮಾನ್ ಭಾರತ್ ಯೋಜನೆಯಡಿ ಲಭ್ಯವಿರುವ 5 ಲಕ್ಷ ರೂ.ಗಳವರೆಗೆ ಉಚಿತ ಚಿಕಿತ್ಸೆ ನೀಡಲಾಗುವುದು ಎಂದರು.

# ಯಶಸ್ವಿನಿ ಯೋಜನೆ – ಅವಧಿ ವಿಸ್ತರಣೆ

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : **2022–23ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಜಾರಿಗೊಳಿಸಲು ಹಾಗೂ ಹೊಸ ಸದಸ್ಯರನ್ನು ನೋಂದಾಯಿಸುವ ಅವಧಿಯನ್ನು ವಿಸ್ತರಿಸುವ ಬಗ್ಗೆ.**

ಉಲ್ಲೇಖ : **1. ಸರ್ಕಾರದ ಆದೇಶ ಸಂಖ್ಯೆ:ಸಿಒ 154(1) ಸಿಎಲ್‌ಎಸ್ 2022, ಬೆಂಗಳೂರು ದಿನಾಂಕ:12.10.2022.**
**2. ಮುಖ್ಯಕಾರ್ಯನಿರ್ವಹಣಾಧಿಕಾರಿ, ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್ ಇವರ ಟಿಪ್ಪಣಿ ಸಂಖ್ಯೆ: ಯಶಸ್ವಿನಿ/024/ಸಿಡಬ್ಲ್ಯೂ–2/2022–23 ದಿನಾಂಕ : 31.12.2022**

### ಪ್ರಸ್ತಾವನೆ

2022–23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 67ರಲ್ಲಿ ಮಾನ್ಯ ಮುಖ್ಯಮಂತ್ರಿಯವರು ಯಶಸ್ವಿನಿ ಯೋಜನೆಗಳನ್ನು ರಾಜ್ಯದಲ್ಲಿ ಮರಿ ಜಾರಿಗೊಳಿಸಲು ಘೋಷಿಸಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ.(1)ರ ಸರ್ಕಾರದ ಆದೇಶದಲ್ಲಿ 2022–23ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷನಾ ಯೋಜನೆಯನ್ನು ಜಾರಿಗೊಳಿಸಲು ಹಾಗೂ ಹೊಸ ಸದಸ್ಯರನ್ನು ನೋಂದಾಯಿಸುವ ಅವಧಿಯನ್ನು ದಿನಾಂಕ : 01.11.2022ರಿಂದ 31.12.2022 ರವರೆಗೆ ನಿಗದಿಗೊಳಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರ.ಸಂ.(2)ರ ಮುಖ್ಯಕಾರ್ಯನಿರ್ವಹರ್ಣಾಧಿಕಾರಿ, ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್ ಇವರ ಟಿಪ್ಪಣಿ ದಿನಾಂಕ : 31.12.2022ರಲ್ಲಿ ಸರ್ಕಾರವು ಯಶಸ್ವಿನಿ ಯೋಜನೆಯ ಸದಸ್ಯತ್ವ ನೋಂದಣಿ ದಿನಾಂಕದ ಅವಧಿಯನ್ನು ದಿನಾಂಕ : 31.12.2022ರ ವರೆಗೆ ನಿಗದಿಪಡಿಸಿದ್ದು, ಈ ಅವಧಿಯಲ್ಲಿ ಅರ್ಹವಿರುವ ಎಲ್ಲಾ ಸದಸ್ಯರನ್ನು ನೋಂದಾಯಿಸಲು ಸಾಧ್ಯವಾಗಿರುವುದಿಲ್ಲವೆಂದು ಹಾಗೂ ಅನೇಕ ಸಹಕಾರ ಸಂಘಗಳ ಸದಸ್ಯರು, ಸಹಕಾರಿಗಳು ಹಾಗೂ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳು ನೋಂದಣಿ ಅವಧಿಯನ್ನು ವಿಸ್ತರಿಸುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ. ಮುಂದುವರೆದು, ಯೋಜನೆಗೆ ನಿಗದಿಪಡಿಸಿರುವ 30ಲಕ್ಷಗಳ ನೋಂದಣಿ ಗುರಿಯನ್ನು ಸಾಧಿಸಲು ನೋಂದಣಿ ದಿನಾಂಕದ ಅವಧಿಯನ್ನು ವಿಸ್ತರಿಸುವುದು ಸಮಂಜಸವೆಂದು ತಿಳಿಸುತ್ತಾ ಸದಸ್ಯತ್ವ ನೋಂದಣಿ ಅವಧಿಯನ್ನು ವಿಸ್ತರಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿಸುತ್ತಾರೆ.

**ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.**

**ಸರ್ಕಾರದ ಆದೇಶ ಸಂಖ್ಯೆ:ಸಿಒ154(1) ಸಿಎಲ್‌ಎಸ್ 2022, ದಿನಾಂಕ:02.01.2023**

**ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2022–23ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಜಾರಿಗೊಳಿಸಲು ಹಾಗೂ ಹೊಸ ಸದಸ್ಯರನ್ನು ನೋಂದಾಯಿಸುವ ಅವಧಿಯನ್ನು ದಿನಾಂಕ:31.01.2023 ರವರೆಗೆ ವಿಸ್ತರಿಸಿ ಆದೇಶಿಸಿದೆ.**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**(ಎ.ಸಿ.ದಿವಾಕರ್)**

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ,

ಸಹಕಾರ ಇಲಾಖೆ

# ಪ್ರಗತಿಯ ಪಥದಲ್ಲಿ ಮೂಡಲಗಿಯ
# ಚೈತನ್ಯ ಅರ್ಬನ್ ಕೊ-ಅಪ್.ಕ್ರೆಡಿಟ್ ಸೊಸಾಯಿಟಿ

ಸಾಮಾನ್ಯವಾಗಿ ಬಡವನ ಸೇವೆಯೇ ಭಗವಂತನ ಸೇವೆ ಎನ್ನುವ ಹಾಗೆ ರೈತರ, ದೀನದಲಿತರ, ಹಿಂದುಳಿದ ವರ್ಗದವರ, ಕಿರು ವ್ಯಾಪಾರಸ್ಥರ, ಕೂಲಿ ಕಾರ್ಮಿಕರು ಹೀಗೆ ಸಮಾಜದ ಎಲ್ಲ ಜನರ ಆಶಾ ಗೋಪುರವನ್ನು ಕಟ್ಟಿದ್ದೇ ಈ ಸಹಕಾರಿ ಕ್ಷೇತ್ರವೆಂದರೆ ತಪ್ಪಾಗಲಿಕ್ಕಿಲ್ಲ.

ಕರ್ನಾಟಕ ರಾಜ್ಯದಲ್ಲಿಯೆ ಬೆಳಗಾವಿ ಜಿಲ್ಲೆ ಅತಿ ಹೆಚ್ಚು ಸಹಕಾರಿ ಸಂಸ್ಥೆಗಳನ್ನು ಹೊಂದಿರುವ ಜಿಲ್ಲೆ. ಬೆಳಗಾವಿ ಜಿಲ್ಲೆಯಲ್ಲಿಯೇ ಮೂಡಲಗಿ ಪಟ್ಟಣ ಅತಿ ಹೆಚ್ಚು ಸಹಕಾರ ಸಂಘಗಳನ್ನು ಹೊಂದಿದ ಪಟ್ಟಣ. ಇದನ್ನು "ಸಹಕಾರ ನಗರ ಮೂಡಲಗಿ" ಎಂದೇ ಗುರುತಿಸುತ್ತಾರೆ. ಈ ರೀತಿಯಾಗಿ ಗುರುತಿಸಿಕೊಂಡ ಸಹಕಾರ ನಗರದಲ್ಲಿ ಚೈತನ್ಯ ಅರ್ಬನ್ ಕೊ-ಆಪ್ ಕ್ರೆಡಿಟ್ ಸೊಸಾಯಿಟಿಯು ಕೂಡಾ ಒಂದು.

ಮಹಾರಾಷ್ಟ್ರ, ಆಂದ್ರಪ್ರದೇಶ, ಕರ್ನಾಟಕ ದಲ್ಲಿಯೇ ಜಾನುವಾರು ದನಗಳ ಪೇಟೆಗೆ ಪ್ರಸಿದ್ಧಿಯಾದ ಊರು. ಗ್ರಾಮ ದೇವರಾದ ಶ್ರೀ ಶಿವಬೋಧ ರಂಗ ಮತ್ತು ಸಹಕಾರ ಪಿತಾಮಹ ಶಿದ್ದನಗೌಡ ಸಣ್ಣರಾಮನಗೌಡ ಪಾಟೀಲ ಇವರ ಆಶೀರ್ವಾದದಿಂದ ದಿ.ಶ್ರೀ ಸಿದ್ದಲಿಂಗಪ್ಪ ಹೊರಟ್ಟಿ ಇವರ ಮಾರ್ಗದರ್ಶನದಲ್ಲಿ 2000-01ರ ಅವಧಿಯಲ್ಲಿ 350 ಸದಸ್ಯರೊಂದಿಗೆ ಕೇವಲ 3,50,000/- ರೂ.ಗಳ ಶೇರು ಬಂಡವಾಳ ದೊಂದಿಗೆ ಕಾರ್ಯಾರಂಭ ಮಾಡಿ ಸಹಕಾರ ಕ್ಷೇತ್ರದಲ್ಲಿ ವಿಶಿಷ್ಟ ಗಮನವನ್ನು ಸೆಳೆದಿದೆ.

ಈ ಸಹಕಾರ ಸಂಘವು 22 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ. ಕಳೆದ 22 ವರ್ಷಗಳಿಂದಲೂ ಶ್ರೀ ತಮ್ಮಣ್ಣ ಕೆಂಚರಡ್ಡಿ ಸಂಘದ ಅದ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಕಳೆದ 8 ವರ್ಷಗಳಿಂದ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಂಘದ ಆರಂಭದಲ್ಲಿ ಅನೇಕ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿತಲ್ಲದೆ ಎಲ್ಲವನ್ನು ನಿಭಾಯಿಸಿಕೊಂಡು ಪ್ರಗತಿಯತ್ತ ಸಾಗಿದೆ. ಸಹಕಾರ ಸಂಘವು ಅತಿ ವೃಷ್ಠಿಯಿಂದಾಗಿ ನೆರೆ ಹಾವಳಿಯಲ್ಲಿ ಸಿಲುಕಿ ನಲುಗಿದ ಲೆಕ್ಕವಿಲ್ಲದಷ್ಟು ಕುಟುಂಬಗಳಿಗೆ ಊಟೋಪಚಾರ, ಕಂಬಳಿ, ಶಾಲಾ ಮಕ್ಕಳಿಗೆ ಪಠ್ಯ ವಸ್ತುಗಳನ್ನು ಮತ್ತು ಅವರ ಆರೋಗ್ಯ ತಪಾಸಣೆಯಂತಹ ಕಾರ್ಯಕ್ರಮಗಳನ್ನು, ಜಾನುವಾರಗಳಿಗೆ ಮೇವು ನೀಡಿ ಮಾನವಿಯತೆ ಮೆರೆಯುಂತಹ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಕೋರೋನ ವೇಳೆಯಲ್ಲಿ ಕೋರೋನಾ ವಾರಿಯರ್‌ಗಳಿಗೆ ಅದರಲ್ಲೂ ಆಶಾ ಕಾರ್ಯಕರ್ತೆಯರಿಗೆ ಗೌರವ ಧನ ನೀಡಿ ಸತ್ಕರಿಸಲಾಯಿತು. ಮತ್ತು ಆರಕ್ಷಕ ಇಲಾಖೆಯ ಸಿಬ್ಬಂದಿಗಳಿಗೆ ಮುಖಗವಚ (ಮಾಸ್ಕ್) ನೀಡಿ ಅವರವರ ಕರ್ತ್ಯವಗಳನ್ನು ನಿಭಾಯಿಸಲು ಸಾಕಷ್ಟು ಧನ ಸಹಾಯ ಮಾಡಿದೆ. ಅಲ್ಲದೆ ಕೋರೋನ ಸಂದರ್ಭದಲ್ಲಿ ಕೋರೋನಾ ವಾರಿಯರ್‌ಗಳಿಗೆ



ಊಟೋಪಚಾರದ ವ್ಯವಸ್ಥೆ ಮಾಡಿದೆ. ಪ್ರತಿ ವರ್ಷವೂ ವಾರ್ಷಿಕ ಮಹಾಸಭೆಯಲ್ಲಿ ಅನೇಕ ಹಿರಿಯ ನಾಗರಿಕರನ್ನು, ಸೇವಾ ನಿವೃತ್ತರನ್ನು, ಮತ್ತು ಸಾಧಕರನ್ನು ಗುರುತಿಸಿ ಅವರನ್ನು ಆಹ್ವಾನಿಸಿ ಸತ್ಕರಿಸಿ ಗೌರವ ಸಲ್ಲಿಸಲಾಗುತ್ತಿದೆ. ಸಾಮಾಜಿಕ, ಸಾಂಸ್ಕೃತಿಕ, ಸಹಕಾರ ಕ್ಷೇತ್ರದ ಸೇವೆಯನ್ನು ಗುರುತಿಸಿ ಕರ್ನಾಟಕ ಸಾಂಸ್ಕೃತಿಕ ಅಕಾಡೆಮಿ, ಬೆಂಗಳೂರು ಇವರು ಸಂಘದ ಅಧ್ಯಕ್ಷರಾದ ಶ್ರೀ ತಮ್ಮಣ್ಣ ಕೆಂಚರಡ್ಡಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ.

ಈ ಸಹಕಾರ ಸಂಘವು ಗ್ರಾಹಕರಿಗೆ ಪರಿಣಾಮಕಾರಿಯಾದ ಸೇವೆಯನ್ನು ನೀಡುತ್ತಿದೆ. ತ್ವರಿತ ಸೇವೆಯ ಫಲವಾಗಿ ಸಂಘವು ತೀವ್ರಗತಿಯಲ್ಲಿ ಅಭಿವೃದ್ಧಿ ಹೊಂದಿದೆ. ಸಹಕಾರ ಸಂಘವು ಪ್ರಧಾನ ಕಚೇರಿಯೊಂದಿಗೆ ಆರು(6) ಶಾಖೆಗಳನ್ನು ಹೊಂದಿ ಕಾರ್ಯನಿರ್ವಹಿಸುತ್ತಿದೆ. ಗೋಕಾಕ ತಾಲೂಕಿನ ಬೆಟಗೇರಿ, ಮೂಡಲಗಿ ತಾಲೂಕಿನ ಧರ್ಮಟ್ಟಿ, ಮುನ್ಯಾಳ, ಸವದತ್ತಿ ತಾಲೂಕಿನ ಯರಗಟ್ಟಿ, ಹಾಗೂ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಲೋಕಾಪೂರ ಮತ್ತು ಮಂಟೂರ ಗ್ರಾಮಗಳಲ್ಲಿ ಶಾಖೆಗಳನ್ನು ಹೊಂದಿದೆ. ಸಂಘದ ಪ್ರಧಾನ ಕಚೇರಿ ಮತ್ತು

| ಸಹಕಾರ ಸಂಘದ ಆರ್ಥಿಕ ನೋಟ ಈ ಕೆಳಗಿನಂತಿದೆ. (31.03.2022ಕ್ಕೆ ಇದ್ದಂತೆ) ಲಕ್ಷ ರೂ.ಗಳಲ್ಲಿ | | |
|---|---|---|
| | **ಸದಸ್ಯರ ಸಂಖ್ಯೆ** | **6,285** |
| 1 | ಶೇರು ಬಂಡವಾಳ | 203.02 |
| 2 | ನಿಧಿಗಳು | 748.98 |
| 3 | ಠೇವುಗಳು | 8,152.91 |
| 4 | ಸಾಲಗಳು | 4,446.89 |
| 5 | ದುಡಿಯುವ ಬಂಡವಾಳ | 9,548.80 |
| 6 | ವಾರ್ಷಿಕ ವಹಿವಾಟು | 24,950.92 |
| 7 | ನಿವ್ವಳ ಲಾಭ | 153.40 |
| 8 | ಅಡಿಟ್ ವರ್ಗಿಕರಣ | " ಅ " |

ಎಲ್ಲ ಶಾಖೆಗಳು ಗಣಕೀಕರಣ ಹೊಂದಿವೆ. ಸದಸ್ಯರಿಗೆ ಮತ್ತು ಗ್ರಾಹಕರರಿಗೆ ಇ–ಸ್ಟಾಂಪಿಂಗ್, ನೆಫ್ಟ್, ಆರ್‌ಟಿಜಿಎಸ್, ಸೇವೆಗಳನ್ನು ಒದಗಿಸಿಕೊಡುತ್ತಿದೆ. ಪ್ರಧಾನ ಕಚೇರಿ, ಮೂಡಲಗಿ ತಾಲೂಕಿನ ಧರ್ಮಟ್ಟಿ ಶಾಖೆ, ಹಾಗೂ ಗೋಕಾಕ ತಾಲೂಕಿನ ಬೆಟಗೇರಿ ಶಾಖೆಗಳಿಗೆ ಸ್ವಂತ ಹೈ–ಟೆಕ ಕಟ್ಟಡವನ್ನು ಹೊಂದಿವೆ. ಅಲ್ಲದೆ, ಮುಧೋಳ ತಾಲೂಕಿನ ಲೋಕಾಪೂರ ಶಾಖೆಗೆ ಮತ್ತು ಸವದತ್ತಿ ತಾಲೂಕಿನ ಯರಗಟ್ಟಿ ಶಾಖೆಗೆ ಸದಸ್ಯರ ವ್ಯವಹಾರಕ್ಕೆ ಅನುಕೂಲವಾಗುವಂತೆ ಸ್ವಂತ ನಿವೇಶನಗಳನ್ನು ಖರೀದಿಸಲಾಗಿದೆ.

ಸಂಘದ ವ್ಯವಹಾರ ಮತ್ತು ದಕ್ಷತೆಯನ್ನು ಗುರುತಿಸಿ 64ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ "ರಾಜ್ಯ ಮಟ್ಟದ ಅತ್ಯುತ್ತಮ ಸಹಕಾರ ಸಂಘ"ವೆಂಬ ಪ್ರಶಸ್ತಿಯನ್ನು ಮಹಾಮಂಡಳವು ನೀಡಿ ಗೌರವಿಸಿದೆ. ಈ ಎಲ್ಲ ಸನ್ಮಾನ ಗೌರವ ಪ್ರಶಸ್ತಿಗಳು ಸಹಕಾರ ಇಲಾಖೆಯ ಮಾರ್ಗದರ್ಶನ, ಮಹಾ ಮಂಡಳಗಳ ಸಹಕಾರ, ಬೆಳಗಾವಿ ಜಿಲ್ಲಾ ಯೂನಿಯನ್‌ನ ಪ್ರೋತ್ಸಾಹ, ಎಲ್ಲ ಸಹಕಾರ ಸಂಘಗಳು, ಸಂಘದ ಸದಸ್ಯರ ಪ್ರೀತಿ ವಿಶ್ವಾಸ, ಸಂಘದ ದಕ್ಷ ಆಡಳಿತ ಮಂಡಳಿ, ಹಾಗೂ ಶ್ರಮಿಜೀವಿಗಳಾದ ಎಲ್ಲ ಸಿಬ್ಬಂದಿಗಳ ದ್ಯೋತಕವಾಗಿದೆ.

# ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ : 27ನೇ ಶಾಖೆ ಉದ್ಘಾಟನೆ



**ಮಂಗಳೂರು :** ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘವು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಾದ್ಯಂತ 26 ಶಾಖೆಗಳನ್ನು ಹೊಂದಿದ್ದು, ಇದೀಗ ತನ್ನ ನೂತನ 27ನೇ ಮಡಂತ್ಯಾರು ಶಾಖೆಯನ್ನು ಬೆಳ್ತಂಗಡಿ ತಾಲೂಕಿನ ಮಡಂತ್ಯಾರಿನ ಶ್ರೀ ದುರ್ಗಾ ಕಾಂಪ್ಲೆಕ್ಸ್ (ಆಶೀರ್ವಾದ್ ಹಾಲ್) ಇಲ್ಲಿ ಜನವರಿ 01 ರಂದು ಭಾನುವಾರ ಬೆಳಿಗ್ಗೆ 11.20 ಗಂಟೆಗೆ ಸಾರ್ವಜನಿಕ ಸೇವೆಗಾಗಿ ಲೋಕಾರ್ಪಣೆಗೊಂಡಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ "ಸಹಕಾರ ರತ್ನ" ಶ್ರೀ ಚಿತ್ತರಂಜನ್ ಬೋಳಾರ್ ವಹಿಸಿದ್ದರು. ಮಾಜಿ ಶಾಸಕರಾದ ಶ್ರೀ ಕೆ. ವಸಂತ ಬಂಗೇರ ಉದ್ಘಾಟನೆ ನೆರವೇರಿಸಿದರು.

ಕರ್ನಾಟಕ ವಿಧಾನ ಪರಿಷತ್ ಶಾಸಕರಾದ ಶ್ರೀ ಪ್ರತಾಪ್ ಸಿಂಹ ನಾಯಕ್, ಮಾಲಾಡಿ ಗ್ರಾಮ ಪಂಚಾಯತ್‌ನ ಅಧ್ಯಕ್ಷರಾದ ಶ್ರೀಮತಿ ಬೇಬಿ ಸುಸ್ಸಾನ, ಶ್ರೀ ಗುರುದೇವ ವಿವಿಧೋದ್ದೇಶ ಸಹಕಾರಿ ಸಂಘ (ನಿ) ಬೆಳ್ತಂಗಡಿ ಇದರ ಅಧ್ಯಕ್ಷರಾದ ಶ್ರೀ ಪದ್ಮನಾಭ ಮಾಣಿಂಜ, ವರ್ತಕರ ಸಂಘ (ರಿ) ಮಡಂತ್ಯಾರು ಇದರ ಅಧ್ಯಕ್ಷರಾದ ಶ್ರೀ ಜಯಂತ್ ಶೆಟ್ಟಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಸೌಮ್ಯ ವಿಜಯ್ ಇನ್ನು ಮುಂತಾದವರು ಸಮಾರಂಭದಲ್ಲಿ ಭಾಗವಹಿಸಿದ್ದರು.

# ಸಂಕ್ರಾಂತಿ : ಬನ್ನಿ ಪ್ರಕೃತಿಯನ್ನು ಪೂಜಿಸೋಣ, ಪರಿಸರ ರಕ್ಷಿಸೋಣ



ಸಂಕ್ರಾಂತಿ ಈ ನೆಲದ ಮಣ್ಣಿನ ಹಬ್ಬ. ಮನುಷ್ಯ ಸಹಿತ ಭೂಮಿಯಲ್ಲಿರುವ ಜೀವಸಂಕುಲಗಳ ಉಳಿವಿಗೆ ಎಲ್ಲವನ್ನು ನೀಡಿದ ಪ್ರಕೃತಿ ಮಾತೆಯನ್ನು ಧನ್ಯತೆಯಿಂದ ಪೂಜಿಸುವುದೇ ಮಕರ ಸಂಕ್ರಾಂತಿ ಹಬ್ಬದ ವಿಶೇಷ. ಕರ್ನಾಟಕ ಸಹಿತ ದೇಶದ ಬಹುತೇಕ ಎಲ್ಲಾ ರಾಜ್ಯಗಳು ಸಂಕ್ರಾತಿ ಹಬ್ಬವನ್ನು ಬೇರೆ ಬೇರೆ ಹೆಸರುಗಳಿಂದ ಆಚರಿಸುತ್ತವೆ.

ಸಂಕ್ರಾಂತಿ ಸುಗ್ಗಿ ಸಂಭ್ರಮದ ಹಬ್ಬ ಅರ್ಥಾತ್ ಕೃಷಿ ಆಚರಣೆ. ನಾಡಿನಾದ್ಯಂತ ಹತ್ತು ಹಲವು ತೆರನಾದ ಸುಗ್ಗಿ ಆಚರಣೆಗಳನ್ನು ಕಾಣಬಹುದು. ಹಳೆ ಮೈಸೂರು ಭಾಗದ ರಾಗಿ ಕಣದಲ್ಲಿ ನಡೆಯುವ ಸುಗ್ಗಿ ಸಂಭ್ರಮ ಒಂದು ಬಗೆಯಾದರೆ, ಉತ್ತರ ಕರ್ನಾಟಕದ ಜೋಳದ ಹೊಲದ ಸುಗ್ಗಿಯ ಸಿರಿಯೇ ಮತ್ತೊಂದು ತೆರನಾದದ್ದು. ಮಲೆನಾಡಿಗರ ಭತ್ತದ ಸುಗ್ಗಿ ಸೊಗಸೇ ಬೇರೆ.

ಮಳೆಗಾಲದಲ್ಲಿ ಹಸಿರಿನಿಂದ ಕಂಗೊಳಿಸುವ ಹೊಲಗದ್ದೆಗಳು ಸಂಕ್ರಾಂತಿಯ ಹೊತ್ತಿಗೆ ಬಟಾ ಬಯಲಾಗಿರುತ್ತವೆ. ಕುಯಿಲಾದ ಬೆಳೆ ಮೆದೆಯ ರೂಪ ತಾಳಿ ಸುಗ್ಗಿಗೆ ಸಿದ್ಧವಾಗಿರುತ್ತದೆ. ರೈತರು ನಿರಾಳವಾಗಿ ಸಂತೋಷಿಸುವ ಕಾಲವಿದು. ಅದಕ್ಕೆ ಕಾರಣವಾದ ಬಸವಣ್ಣನಿಗೆ ಕೃತಜ್ಞತೆ ಅರ್ಪಿಸಲು ರೈತ ಸಮುದಾಯ ಕಾತರದಿಂದ ಸಂಕ್ರಾಂತಿಗಾಗಿ ಕಾಯುತ್ತದೆ.

ಸಂಕ್ರಾಂತಿ ಪ್ರಕೃತಿಯ ಮನ್ವಂತರ ಪ್ರತಿನಿಧಿಸುವ ಹಬ್ಬ ಕೂಡ. ಸೂರ್ಯ ಕರ್ಕಾಟಕ ರಾಶಿಯಿಂದ ಉತ್ತರಾಯಣದ ಮಕರ ರಾಶಿಯತ್ತ ತನ್ನ ದಿಕ್ಕು ಬದಲಿಸುವ ಪರಿವರ್ತನಾ ಕಾಲ. ಸಂಕ್ರಾಂತಿಯ ನಂತರ ಹಗಲಿನ ಕಾಲಾವಧಿ ಹೆಚ್ಚುತ್ತದೆ. ಶೂನ್ಯ ಮಾಸದಲ್ಲಿ, ಕೊರೆವ ಚಳಿಯಲ್ಲಿ ಜಡವಾಗಿದ್ದ ಮರಗಿಡಗಳಲ್ಲಿ ಎಲೆ ಉದುರಿ, ಹೊಸ ಚಿಗುರು ಬರಲಾರಂಭಿಸುತ್ತದೆ. ಶಿಶಿರ ಋತುವಿನ ಆರಂಭ ಕೂಡ.

ಸಂಕ್ರಾಂತಿ ಅಪ್ಪಟ ಹಳ್ಳಿಗರ ಹಬ್ಬ. ಪ್ರದೇಶದಿಂದ ಪ್ರದೇಶಕ್ಕೆ ಸಂಕ್ರಾಂತಿಯ ಆಚರಣೆಯ ವಿಧಾನಗಳು ಬದಲಾಗುತ್ತಾ ಹೋಗುತ್ತವೆ. ಸಂಕ್ರಾಂತಿಗಿಂತ ಮುನ್ನವೇ ಕೊಡಗಿನ ಹುತ್ತರಿ ಹಬ್ಬ ಬರುತ್ತದೆ. ಹೊಸ ಭತ್ತವನ್ನು ಗದ್ದೆಯಿಂದ ತಂದು ಮನೆ ತುಂಬಿಸಿಕೊಳ್ಳುವ, ಮಳೆದೇವ ಇಗ್ಗುತಪ್ಪನಿಗೆ ಭಕ್ತಿಯಿಂದ ನಮಸ್ಕರಿಸುವ ಆಚರಣೆ. ದಕ್ಷಿಣ ಕರ್ನಾಟಕದಲ್ಲಿ ಸಂಕ್ರಾಂತಿ ಸಂದರ್ಭದಲ್ಲಿ ದನಕರುಗಳ ಮೈ ತೊಳೆದು, ಮೈ ಮೇಲೆ ಅರಿಷಿಣ, ಕುಂಕುಮದಿಂದ ಚಿತ್ರ ಬರೆದು, ಕೊಂಬಿಗೆ ಬಣ್ಣ ಹಚ್ಚಿ, ರಂಗು ರಂಗಿನ ಬಲೂನು, ನವಿಲುಗರಿ ಕಟ್ಟಿ ಶೃಂಗರಿಸುತ್ತಾರೆ. ದೇವಲೋಕದ ಕಾಮಧೇನು ಭೂಮಿಗೆ ಇಳಿದಂತೆ ಭಾಸವಾಗುತ್ತದೆ.

ಇಳಿಸಂಜೆಗೆ ಊರ ಹೊರಗಿನ ರಸ್ತೆಯಲ್ಲಿ ಹುಲ್ಲು ಹರಡಿ, ಬೆಂಕಿ ಹಾಕಿ ದನಗಳನ್ನು 'ಕಿಚ್ಚು' ಹಾಯಿಸುತ್ತಾರೆ. ಹಳ್ಳಿಕಾರ್ ಹೋರಿಗಳು ಮೊದಲು ಬೆಂಕಿ ಹಾಯುತ್ತವೆ. ಬೆಂಕಿಯ ಕೆನ್ನಾಲಿಗೆಯ ನಡುವೆ ಜಿಗಿದು ಹೋಗುವ ಹೋರಿ ಮತ್ತು ಅದರ ಮಾಲೀಕರಿಗೆ ಚಪ್ಪಾಳೆ, ಕೇಕೆಗಳ ಪುರಸ್ಕಾರ. ಮನೆಗೆ ಹಿಂತಿರುಗುವ ದನಕರುಗಳಿಗೆ ಮಂಗಳಾರತಿ ಮಾಡಿ, ಅವುಗಳ ಕಾಲು ಮುಟ್ಟಿ ನಮಸ್ಕರಿಸಿ 'ಈ ವರ್ಷವೂ ನಮಗೆ ಹೆಗಲು ಕೊಡು ಬಸವಣ್ಣ' ಎಂದು ಪ್ರಾರ್ಥಿಸುತ್ತಾರೆ. ಹಬ್ಬದ ತಿಂಡಿ ತಿನ್ನಿಸುತ್ತಾರೆ.

ರಾಮನಗರ ಮತ್ತು ಮಂಡ್ಯದ ಕೆಲವು ಪ್ರದೇಶಗಳಲ್ಲಿ ಕಾಟುಮರಾಯನ ಪೂಜಿಸುವ ಸಂಪ್ರದಾಯವಿದೆ. ಊರಿನ ಕೆರೆ, ಕುಂಟೆಯ ಬಳಿ ಹಸಿ ಜೇಡಿಮಣ್ಣಿನಿಂದ ಗೋಪುರದ ಆಕಾರದಲ್ಲಿ ಕಾಟುಮರಾಯನ ಮೂರ್ತಿ ಮಾಡುತ್ತಾರೆ. ಇದಕ್ಕೆ ಅರಿಷಿಣ– ಕುಂಕುಮ ಬಳಿದು ಕಾರೆಗಿಡದ ಮುಳ್ಳಿನ ಕೊಂಬೆ ನೆಟ್ಟು, ಮುಳ್ಳಿನ ತುದಿಗೆ ಉಗುನಿ ಹೂ ಸಿಕ್ಕಿಸುತ್ತಾರೆ. ಮಣ್ಣಿನ ಮೂರ್ತಿಯ ತಳಭಾಗದಲ್ಲಿ ಗೂಡು ಮಾಡಿ ದೀಪ ಹಚ್ಚಿಡುತ್ತಾರೆ. ಕಾಟುಮರಾಯನಿಗೆ ಪೂಜೆ ಮಾಡಿದ ನಂತರ ದನಗಳ ಮೆರವಣಿಗೆ ಆರಂಭವಾಗುತ್ತದೆ.

ಸಂಕ್ರಾಂತಿ ದಿನ ಸಗಣಿಯಿಂದ ಮಾಡಿದ ಪಿಳ್ಳೇರಾಯನಿಗೆ ತುಂಬೆ, ಉಗುನಿ, ಅಣ್ಣೆ ಹೂಗಳನ್ನು ಚುಚ್ಚಿ ಬಾಗಿಲಿನ ಎರಡೂ ಬದಿ ಅಂಟಿಸುವುದು ವಿಶೇಷ. ಜನಪದರ ದೃಷ್ಟಿಯಲ್ಲಿ ಬೆಳೆ–ಕಳೆ ಎಂಬುದರಲ್ಲಿ ಬೇಧ ಭಾವ ಇಲ್ಲ. ಇವರ ದೃಷ್ಟಿಯಲ್ಲಿ ಬೆಳೆಯಷ್ಟೇ ಕಳೆಗಳೂ ಪವಿತ್ರ. ನೆಲದ ಫಲವತ್ತತೆಯನ್ನು ಕಳೆಗಳು ಪ್ರತಿನಿಧಿಸುವುದರಿಂದ ಸಂಕ್ರಾಂತಿಯ ಆಚರಣೆಯಲ್ಲಿ ಅಣ್ಣೆ ಹೂವು ಮತ್ತು ಉಗನಿ

ಹೂವಿಗೆ ವಿಶೇಷ ಪ್ರಾಶಸ್ತ್ಯ.

ಸಂಕ್ರಾಂತಿಯ ದಿನದ ಅಡುಗೆ ಕೂಡ ವಿಶೇಷವೇ. ಅವರೆಕಾಯಿ, ಹಸಿ ಕಡಲೆಕಾಯಿ ಮತ್ತು ಗೆಣಸನ್ನು ಜೊತೆ ಸೇರಿಸಿ ಬೇಯಿಸಲಾಗುತ್ತದೆ. ತುಪ್ಪ, ಹಾಲು, ಅಕ್ಕಿ ಹಾಗೂ ಬೆಲ್ಲದಿಂದ ರುಚಿ ರುಚಿಯಾದ ಪೊಂಗಲ್ ತಯಾರಿಸಲಾಗುತ್ತದೆ. ದನಕರುಗಳಿಗೆ ಮೊದಲು ತಿನ್ನಿಸಿದ ನಂತರವೇ ಮನೆಯವರಿಗೆ ತಿನ್ನಲು ಸಿಗುತ್ತದೆ. ಸಂಕ್ರಾಂತಿಯ ಸಂಭ್ರಮ ಒಂದೇ ದಿನಕ್ಕೆ ಮುಗಿಯುವುದಿಲ್ಲ. ಹಬ್ಬದ ನಂತರ ಹದಿನೈದು ದಿನಗಳ ಕಾಲ ಒಂದಲ್ಲ ಒಂದು ಊರಿನಲ್ಲಿ 'ದನ ಓಡಿಸುವ' ಆಚರಣೆ ಇರುತ್ತದೆ. ಊರಿನ ಪ್ರಮುಖ ಬೀದಿಯಲ್ಲಿ ದನಗಳನ್ನು ಓಡಿಸಲಾಗುತ್ತದೆ.



ಸರದಿಯ ಪ್ರಕಾರ ದನಗಳನ್ನು ಬಿಡಲಾಗುತ್ತದೆ. ಇಕ್ಕಟ್ಟಾದ, ಅಂಕುಡೊಂಕಿನ ಬೀದಿಯ ಕೊನೆಗೆ ನುಗ್ಗಿಬರುವ ದನವನ್ನು ಹಿಡಿಯಲು ಕಟ್ಟು ಮಸ್ತಾದ ಯುವಕರು ಕಾದು ನಿಂತಿರುತ್ತಾರೆ. ತಮಟೆ ಸದ್ದಿಗೆ, ಜನರ ಕೇಕೆ, ಗದ್ದಲಕ್ಕೆ ಬೆದರಿ ದಿಕ್ಕಾಪಾಲಾಗಿ ಓಡಿ ಬರುವ ದನದ ಕೊರಳಿಗೆ ಜೋತು ಬಿದ್ದು, ಮೂಗುದಾರ ಹಿಡಿದು ನಿಲ್ಲಿಸುವ ಕ್ಷಣಗಳನ್ನು ನೋಡುವುದೇ ಒಂದು ರೋಮಾಂಚನ.

ಉತ್ತರ ಕರ್ನಾಟಕದ ಸಂಕ್ರಾಂತಿಯ ಸಂಭ್ರಮ ವಿಶಿಷ್ಟ ವಾದದ್ದು. ಹಬ್ಬದ ದಿನ ಮನೆ ಸ್ವಚ್ಛ ಮಾಡಿ, ಬಾಗಿಲಿಗೆ ಜೋಳದ ದಂಟು ಮತ್ತು ಮಾವಿನ ಎಲೆಗಳ ತೋರಣ ಕಟ್ಟಲಾಗುತ್ತದೆ. ಮನೆ ಮುಂದೆ ರಂಗೋಲಿ ಹಾಕಿ, ಅದರ ನಡುವೆ ಸಗಣಿಯ ಉಂಡೆ ಇಟ್ಟು ಹೂವಿನಿಂದ ಸಿಂಗರಿಸುತ್ತಾರೆ. ಸಿಹಿ ಅಡುಗೆ, ಎಳ್ಳು ರೊಟ್ಟಿ, ಪುಂಡಿ ಪಲ್ಲೆ ಅಡುಗೆ ಮಾಡುತ್ತಾರೆ. ದನಕರುಗಳಿಗೆ ಮೈತೊಳೆದು ಸಿಂಗರಿಸುತ್ತಾರೆ. ಅವುಗಳೊಟ್ಟಿಗೆ ಹೊಲಕ್ಕೆ ಹೋಗಿ, ಹಿಂಗಾರಿನ ಫಸಲಿಗೆ ಪೂಜೆ ಮಾಡುತ್ತಾರೆ. ಹೊಲದಲ್ಲೇ ಊಟ ಮಾಡುತ್ತಾರೆ. ಸಂಜೆ ಮನೆಗೆ ಬರುವಾಗ ಹೊಲದಿಂದ ಎಳ್ಳಿನ ಕಡ್ಡಿಗಳ ತರುತ್ತಾರೆ. ಅವನ್ನು ಮನೆಯ ಮುಂದೆ ಹರಡಿ, ಬೆಂಕಿ ಹಾಕುತ್ತಾರೆ. ದನಕರುಗಳನ್ನು ಬೆಂಕಿಯಲ್ಲಿ ಹಾಯಿಸಿ ಮನೆಗೆ ಬರಮಾಡಿಕೊಳ್ಳುತ್ತಾರೆ. ಸಂಕ್ರಾಂತಿ ಆಚರಣೆ ಸಮಯದಲ್ಲಿ ಕರ್ನಾಟಕದಲ್ಲಿ ಎತ್ತುಗಳಿಗೆ ಕಿಚ್ಚುಹಾಯಿಸಿದರೆ. ತಮಿಳುನಾಡಿನಲ್ಲಿ ಜಲ್ಲಿಕಟ್ಟು ಹೆಸರಿನಲ್ಲಿ ಹೋರಿಗಳನ್ನು ಓಡಿಸುವ ಸ್ಪರ್ಧೆ ನಡೆಸಲಾಗುತ್ತದೆ. ಇದು ಅತ್ಯಂತ ಅಪಾಯಕಾರಿ ಸ್ಪರ್ಧೆಯಾಗಿದ್ದು ಸ್ಪರ್ಧೆಯಲ್ಲಿ ಭಾಗವಹಿಸಿದ ಯುವಕರು ಪ್ರಾಣ ಕಳೆದುಕೊಂಡ ಘಟನೆಗಳು ನಡೆದಿವೆ.




ತಮಿಳುನಾಡಿನಲ್ಲಿ ಪೊಂಗಲ್ ಹೆಸರಿನಲ್ಲಿ ಸಂಕ್ರಾಂತಿ ಹಬ್ಬವನ್ನು ನಾಲ್ಕು ದಿನಗಳ ಕಾಲ ಸಡಗರ ಸಂಭ್ರಮದಿಂದ ಆಚರಿಸಲಾಗುತ್ತದೆ. ಸಂಕ್ರಾಂತಿ ಆಚರಣೆ ಅಂಗವಾಗಿ ಅಯ್ಯಪ್ಪ ಸ್ವಾಮಿಯ ದರ್ಶನಕ್ಕೆ ದೇಶದ ಮೂಲೆ ಮೂಲೆಗಳಿಂದ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ. ಈ ಸಮಯದಲ್ಲಿ ಭಕ್ತರಿಗೆ ಮಕರ ಜ್ಯೋತಿಯ ದರ್ಶನವು ಆಗುತ್ತದೆ. ಅದೇ ರೀತಿ ತಿರುಪತಿ ಸಹಿತ ಧಾರ್ಮಿಕ ತಾಣಗಳಿಗೆ ಲಕ್ಷಾಂತರ ಭಕ್ತರು ಆಗಮಿಸಿ ವಿಶೇಷ ಪೂಜೆ ಸಲ್ಲಿಸುತ್ತಾರೆ.

ಬೆಂಗಳೂರಿನ ಕೆಂಪೇಗೌಡ ನಗರದಲ್ಲಿರುವ ಗವಿಗಂಗಾಧರ ದೇವಸ್ಥಾನದಲ್ಲಿ ಸಂಕ್ರಾಂತಿಯ ದಿನ ಗವಿಗಂಗಾಧರ ಮೂರ್ತಿಯ ಮೇಲೆ ಬೀಳುವ ಸೂರ್ಯನ ಕಿರಣ ನೋಡಲು ಲಕ್ಷಾಂತರ ಭಕ್ತರು ಆಗಮಿಸುತ್ತಾರೆ. ಮನುಷ್ಯ ಸಹಿತ ಜಗತ್ತಿನ ಜೀವ ಜಂತುಗಳ ಉಳಿವಿಗೆ ಸಕಲವನ್ನು ಕರುಣಿಸುವ ಪ್ರಕೃತಿ ಮಾತೆಯನ್ನು ಕೃತಜ್ಞತೆಯಿಂದ ಪೂಜಿಸಿ ಅದಕ್ಕೆ ವಿದೇಯರಾಗಿ ಇರುವುದೆ ಸಂಕ್ರಾಂತಿ ಹಬ್ಬದ ನಿಜವಾದ ಮರ್ಮ.

**– ಸವಿತಾ ನಾಯ್ಕ್**

## ಜಗತ್ತಿನ ಬೃಹತ್ ಪ್ರಜಾಪ್ರಭುತ್ವ ದೇಶ ಎಂಬ ಹೆಗ್ಗಳಿಕೆ ಗಳಿಸಿರುವ ಭಾರತಕ್ಕೆ

# 74ನೇ ಗಣರಾಜ್ಯೋತ್ಸವದ ಸಂಭ್ರಮ



130 ಕೋಟಿ ಅಧಿಕ ಜನಸಂಖ್ಯೆ ಹೊಂದಿರುವ ಭಾರತ ಬಾಹ್ಯಾಕಾಶ, ಮಾಹಿತಿ ತಂತ್ರಜ್ಞಾನ, ವಿಜ್ಞಾನ ಮತ್ತು ಸಂಶೋಧನೆ, ಕೃಷಿ ಸಹಿತ ನಾನಾ ಕ್ಷೇತ್ರಗಳಲ್ಲಿ ಮಹತ್ವದ ಸಾಧನೆ ಮಾಡಿದ್ದು ಐದು ಟ್ರಿಲಿಯನ್ ಡಾಲರ್ ಆರ್ಥಿಕ ಶಕ್ತಿಯಾಗುವ ದಿಕ್ಕಿನಲ್ಲಿ ದಾಪುಗಾಲು ಹಾಕುವ ಮೂಲಕ ವಿಶ್ವದ ಬೃಹತ್ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲು ಸಜ್ಜಾಗಿದೆ.

ಅತ್ಯಂತ ದೊಡ್ಡ ಸಂಖ್ಯೆಯ ವಿದ್ಯಾವಂತ ಯುವ ಸಮುದಾಯ ಹೊಂದಿರುವುದೇ ಭಾರತದ ಹೆಗ್ಗಳಿಕೆ. ಆದರೂ ಜಾತಿ, ಮತ, ಧರ್ಮ ಭಾಷೆಗಳ ಹೆಸರಿನಲ್ಲಿ ನಡೆಯುತ್ತಿರುವ ಸಂಘರ್ಷಗಳು ಭಾರತದ ಆರ್ಥಿಕ ಬೆಳವಣಿಗೆಗೆ ವೇಗವನ್ನು ತಗ್ಗಿಸುತ್ತಿರುವುದು ದೇಶದ ಪ್ರಗತಿಗೆ ದೊಡ್ಡ ಹಿನ್ನಡೆಯಾಗಿದೆ. ದೇಶವು 1947ರಲ್ಲಿ ಬ್ರಿಟಿಷರಿಂದ ಸ್ವಾತಂತ್ರ್ಯವನ್ನು ಪಡೆದುಕೊಂಡಿತು, ಆದರೆ ಮೂರು ವರ್ಷಗಳ ನಂತರ ಅಂದರೆ ಜನವರಿ 26, 1950ರಂದು ಭಾರತದಲ್ಲಿ ಸಂವಿಧಾನವು ಜಾರಿಗೆ ಬಂದಿತು. ಈ ಕಾರಣದಿಂದಾಗಿ, ಪ್ರತಿ ವರ್ಷ ಜನವರಿ 26ರಂದು ಗಣರಾಜ್ಯೋತ್ಸವವನ್ನು ಆಚರಣೆ ಮಾಡಿಕೊಂಡು ಬರಲಾಗುತ್ತಿದೆ. ಡಾ. ಬಾಬಾಸಾಹೇಬ್ ಭೀಮರಾವ್ ಅಂಬೇಡ್ಕರ್ ಅವರು ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿದ್ದರು. ನವೆಂಬರ್ 26, 1949ರಂದು "ಭಾರತ ಸಂವಿಧಾನ"ವನ್ನು "ಭಾರತದ ಸಂವಿಧಾನ ಸಭೆ"ಯು ಅಂಗೀಕರಿಸಿದ ಕಾರಣ ದೇಶದಲ್ಲಿ ಪ್ರತಿ ವರ್ಷ ನವೆಂಬರ್ 26ರಂದು "ಸಂವಿಧಾನ ದಿನ"ವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಭಾರತದ ಸಂವಿಧಾನವನ್ನು ರಚಿಸುವ ಉದ್ದೇಶವನ್ನು ಹೊಂದಿದ್ದ ಸಂವಿಧಾನ ಸಭೆಯು ತನ್ನ ಮೊದಲ ಸಭೆಯನ್ನು ಡಿಸೆಂಬರ್ 9, 1946ರಂದು ನಡೆಸಿತು. ಕೊನೆಯ ಸಭೆ ನವೆಂಬರ್ 26, 1949ರಂದು ಕೊನೆಗೊಂಡಿತು. ಒಂದು ವರ್ಷದ ತರುವಾಯ ಸಂವಿಧಾನವನ್ನು ಅಂಗೀಕಾರ ಮಾಡಲಾಯಿತು.

ಗಣರಾಜ್ಯೋತ್ಸವವು "ಸ್ವತಂತ್ರ ಭಾರತದ ಆತ್ಮದ ಸಂಕೇತ"ವಾಗಿದೆ. 1930ರಲ್ಲಿ ಈ ದಿನದಂದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ "ಪೂರ್ಣ ಸ್ವರಾಜ್" ಎಂದು ಘೋಷಿಸಿತು. ಈ ದಿನವು ಭಾರತೀಯರಿಗೆ ತಮ್ಮ ಸರ್ಕಾರವನ್ನು "ಪ್ರಜಾಸತ್ತಾತ್ಮಕವಾಗಿ ಆಯ್ಕೆ ಮಾಡುವ ಶಕ್ತಿ"ಯನ್ನು ನೆನಪಿಸಿಕೊಡುತ್ತದೆ. ಜನವರಿ 26ರ ದಿನದ ಪ್ರಮುಖ ಆಕರ್ಷಣೆಯೆಂದರೆ ಪರೇಡ್. ಇದು ದೆಹಲಿಯ ರಾಜಪಥದಿಂದ ಪ್ರಾರಂಭವಾಗಿ ಇಂಡಿಯಾ ಗೇಟ್ ವರೆಗೆ ಸೇನೆ ತನ್ನ ಶಕ್ತಿ ಪ್ರದರ್ಶನ ತೋರಿಸುತ್ತದೆ. ಗಣರಾಜ್ಯೋತ್ಸವ ಪಥ ಸಂಚಲನದಲ್ಲಿ ಭಾರತದ ರಕ್ಷಣಾ ಪಡೆಗಳ ಬೃಹತ್ ಶಕ್ತಿಯ ಪ್ರದರ್ಶನ ನೋಡುವುದೇ ಕಣ್ಣಿಗೆ ಹಬ್ಬ. ಇದರೊಂದಿಗೆ ಮಿಲಿಟರಿ ಬ್ಯಾಂಡ್‌ಗಳು ಮತ್ತು ವಿವಿಧ ರಾಜ್ಯಗಳ, ಇಲಾಖೆಗಳ ಮತ್ತು ಸಶಸ್ತ್ರ ಪಡೆಗಳ ಸ್ತಬ್ಧ ಚಿತ್ರಗಳು ಪ್ರಮುಖ ಆಕರ್ಷಣೆ. ಬುಡಕಟ್ಟು ಸಮುದಾಯದ ದ್ರೌಪದಿ ಮುರ್ಮ ಅವರು ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ಪ್ರಥಮ ಗಣರಾಜ್ಯೋತ್ಸವ ಆಚರಿಸುತ್ತಿರುವುದು ದೇಶದ ಪ್ರಜಾತಂತ್ರ ಶಕ್ತಿಯ ದ್ಯೋತಕವಾಗಿದೆ. ಅಲ್ಲದೆ ಇದು ದೇಶದ ಮೂಲ ನಿವಾಸಿಗಳಿಗೆ ಸಂದ ದೊಡ್ಡ ಗೌರವ. ಭಾರತೀಯ ಸೇನೆ, ನೌಕಾಪಡೆ ಮತ್ತು ವಾಯುಪಡೆಯಿಂದ ಭಾರತದ ಸಾಂಸ್ಕೃತಿಕ ಮತ್ತು ಸಾಮಾಜಿಕ ಪರಂಪರೆಯನ್ನು ಪ್ರದರ್ಶಿಸಲಾಗುತ್ತದೆ. ಇದರೊಂದಿಗೆ, ವಿವಿಧ ರಾಜ್ಯಗಳ ಸ್ತಬ್ಧಚಿತ್ರಗಳು ರಾಜಪಥದಲ್ಲಿ ಕಾಣಿಸಿಕೊಳ್ಳುತ್ತವೆ. ಇದು ಆಯಾ ರಾಜ್ಯಗಳ ಸಂಸ್ಕೃತಿಯನ್ನು ಬಿಂಬಿಸುತ್ತವೆ.

ರಾಜಧಾನಿ ಬೆಂಗಳೂರಿನ ಮಾಣಿಕಷಾ ಪರೇಡ್ ಮೈದಾನದಲ್ಲಿ ನಡೆಯುವ ಗಣರಾಜ್ಯೋತ್ಸವ ಕಾರ್ಯಕ್ರಮ ಅದ್ದೂರಿಯಾಗಿದ್ದು ಇಲ್ಲಿ ನಡೆಯುವ ಸಶಸ್ತ್ರ ಪಡೆಗಳ ಪ್ರದರ್ಶನ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ. ರಾಜ್ಯಪಾಲ ತಾವರ್ ಚಂದ್ ಗೆಹ್ಲೋಟ್ ರಾಷ್ಟ್ರ ಧ್ವಜರೋಹಣ ಮಾಡಿ ನಾಡಿನ ಜನತೆಗೆ ಸಂದೇಶ ನೀಡಿ ದೇಶದ ಅಭಿವೃದ್ಧಿಗೆ ಯುವಕರು ಕೈಜೋಡಿಸಬೇಕು ಎಂದು ಕರೆ ನೀಡಿದರು.

**– ಮಂಜುನಾಥ್ ನಾಯ್ಕ್**




# ಸರಳ ಸಹಕಾರಿ ಸಿಂ.ಲಿಂ. ನಾಗರಾಜು

▸▸ ಲಕ್ಷ್ಮೀಪತಯ್ಯ, ಕೆ.ಸಿ.ಎಸ್., ಸಹಕಾರ ಸಂಘಗಳ ಜಂಟಿ ನಿಬಂಧಕರು ಹಾಗೂ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು

ಈ ನಾಡು ಕಂಡ ಅಪರೂಪದ ಸರಳ, ಸಜ್ಜನಿಕೆಯ ಸಹಕಾರಿ ಅಂದರೆ ಅದು ಸಿಂ.ಲಿಂ. ನಾಗರಾಜು ಎಂದು ಸಹಕಾರ ಕ್ಷೇತ್ರ ಹಾಗೂ ಸಿಂ.ಲಿಂ. ನಾಗರಾಜುರವರ ಬಗ್ಗೆ ತಿಳಿದಿರುವ ಪ್ರತಿಯೊಬ್ಬರ ಅಭಿಪ್ರಾಯವಾಗಿದೆ.

ಸಿಂ.ಲಿಂ. ನಾಗರಾಜುರವರು ಚನ್ನಪಟ್ಟಣ ತಾಲ್ಲೂಕು, ಸಿಂಗರಾಜಪುರ ಗ್ರಾಮದಲ್ಲಿ ಲಿಂಗಪ್ಪ ಮತ್ತು ಲಕ್ಷ್ಮೀದೇವಮ್ಮ ದಂಪತಿಗಳ ಮಗನಾಗಿ 1947ರ ಡಿಸೆಂಬರ್ 22ರಲ್ಲಿ ಜನಿಸಿದರು. ನಾಗರಾಜುರವರ ತಾಯಿಯ ಊರು ಮೈಸೂರು. ತಾತನ ಊರು ಮೈಸೂರಿನಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದ ಅವರು ಪ್ರೌಢಶಿಕ್ಷಣವನ್ನು ಮೈಸೂರಿನ ಪ್ರತಿಷ್ಠಿತ ಬನುಮಯ್ಯ ಕಾಲೇಜಿನಲ್ಲಿ ಮುಗಿಸಿದರು. 1963ರಲ್ಲಿ ಬನುಮಯ್ಯ ಪ್ರೌಢಶಾಲೆಯಲ್ಲಿ ಹತ್ತನೆ ತರಗತಿ ಓದುತ್ತಿದ್ದಾಗ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿದ್ದ ಸಿಂ.ಲಿಂ. ನಾಗರಾಜುರವರು ಶಾಲೆಯ ವಾರ್ಷಿಕೋತ್ಸವ ಸಮಾರಂಭಕ್ಕೆ ಸಾಹಿತಿ ತರಾಸು ಅವರನ್ನು ಆಹ್ವಾನಿಸಲು ಹೋಗಿದ್ದ ಸಂದರ್ಭದಲ್ಲಿ ಎಸ್.ಎಲ್. ನಾಗರಾಜ ಬದಲು ಸಿಂ.ಲಿಂ. ನಾಗರಾಜ ಎಂಬುದಾಗಿ ಬದಲಾಯಿಸಿಕೊಂಡರೆ ಶಾಲಾ ಕಾರ್ಯಕ್ರಮಕ್ಕೆ ಬರುವುದಾಗಿ ತಿಳಿಸಿದರು. ತಕ್ಷಣ ಅವರು ಎಸ್.ಸಿ. ಬದಲಾಗಿ ಕನ್ನಡದಲ್ಲಿ ಸಿಂ.ಲಿಂ. ಎಂಬುದಾಗಿ ಬದಲಾಯಿಸಿಕೊಂಡರು.



1963ರಲ್ಲಿ ವಾಣಿಜ್ಯ ವಿದ್ಯಾರ್ಥಿಯಾಗಿದ್ದ ನಾಗರಾಜರವರ ಸಹಪಾಠಿಯಾದ ವಾಟಾಳ್ ನಾಗರಾಜುರವರ ಪ್ರಭಾವಕ್ಕೆ ಒಳಗಾಗಿ ಕಾಲೇಜು ವಿದ್ಯಾಭ್ಯಾಸ ಬಿಟ್ಟು 1967ರಲ್ಲಿ ನಡೆದ ವಿಧಾನಸಭೆ ಚುನಾವಣೆಯನ್ನು ಸಮಾನ ಮನಸ್ಕರ ಜೊತೆಗೂಡಿ ವಾಟಾಳ್ ನಾಗರಾಜುರವರ ಪರವಾಗಿ ಪ್ರಚಾರ ಮಾಡಿ ಅವರನ್ನು ಗೆಲ್ಲಿಸಲು 1977ರಲ್ಲಿ ಮೈಸೂರು ಮಹಾನಗರ ಪಾಲಿಕೆಗೆ ವಾಟಾಳ ನಾಗರಾಜುರವರು ಕನ್ನಡ ಪಕ್ಷದಿಂದ ಸ್ಪರ್ಧಿಸಿ ಅತಿಕಡಿಮೆ ಮತಗಳಿಂದ ಪರಾಜಿತರಾದವರು. 1975ರ ತುರ್ತು ಪರಿಸ್ಥಿತಿ ಘಟನೆಯಾದಾಗ ಬೆಂಗಳೂರು ಕಾರಾಗೃಹದಲ್ಲಿ ಸೆರೆಮನೆ ವಾಸ ಅನುಭವಿಸಿದರು. 1985ರಲ್ಲಿ ದೇವೇಗೌಡರ ಹಿಂಬಾಲಕರಾಗಿ ದೇವೇಗೌಡರ ಜಿಲ್ಲಾಮಟ್ಟದ, ತಾಲ್ಲೂಕು ಚುನಾವಣೆಯಲ್ಲಿ ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಿ ತಾಲ್ಲೂಕು ಪಂಚಾಯಿತಿ ಸದಸ್ಯರಾದರು. 2011ರಲ್ಲಿ ವಿಧಾನಸಭಾ ಉಪಚುನಾವಣೆಯಲ್ಲಿ ದೇವೇಗೌಡರು ತಮ್ಮ ಜನತಾಪಕ್ಷದಿಂದ ಒಬ್ಬ ಪ್ರಾಮಾಣಿಕ ಅಭ್ಯರ್ಥಿಯನ್ನು ನಿಲ್ಲಿಸಬೇಕೆಂದು ಬಂದಾಗ ಬಂದ ಹೆಸರು ಸಿಂ.ಲಿಂ. ನಾಗರಾಜು. ವಿಧಾನಸಭಾ ಉಪಚುನಾವಣೆಯಲ್ಲಿ ಅವರು ತಮ್ಮ ವ್ಯಕ್ತಿತ್ವದ ಮೇಲೆ ಜನರ ಒಲವಿನಿಂದ ಅತಿ ಕಡಿಮೆ ಅಂತರದಿಂದ ಸೋಲು ಕಂಡರು.

2016ರಲ್ಲಿ ನಡೆದ ರಾಮನಗರ ಜಿಲ್ಲಾಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿದ ನಾಗರಾಜುರವರು 5 ವರ್ಷಗಳ ಕಾಲ ಜಿಲ್ಲಾ ಅಧ್ಯಕ್ಷರಾಗಿ ಉತ್ತಮ ಕನ್ನಡ ಕೆಲಸ ಮಾಡಿದರು. ತಾಲ್ಲೂಕು, ಹೋಬಳಿ, ಜಿಲ್ಲೆಯಲ್ಲಿ ಸಮ್ಮೇಳನವನ್ನು, ಕವಿಗೋಷ್ಠಿಗಳನ್ನು, ವಿಚಾರ ಸಂಕಿರಣಗಳನ್ನು ಯಶಸ್ವಿಯಾಗಿ ನಡೆಸಿದರು. ಕನ್ನಡ ಸಾಹಿತ್ಯ ಪರಿಷತ್ತಿಗೆ ಸದಸ್ಯತ್ವ ಅಭಿಯಾನ ಮಾಡಿ, ಜಿಲ್ಲೆಯಲ್ಲಿ ಹೆಚ್ಚು ಸದಸ್ಯರನ್ನು ನೊಂದಣಿ ಮಾಡಿಸಿದರು. ತಮ್ಮ ಬರವಣಿಗೆಯಲ್ಲಿ ತಪ್ಪದೆ ಕನ್ನಡ ಅಂಕಿಗಳನ್ನೇ ಬಳಸುತ್ತಿದ್ದ ಇವರು ಪುಸ್ತಕ ಪ್ರೇಮಿಯಾಗಿದ್ದರಿಂದ ಯಾವುದೇ ಸಂಘ ಸಂಸ್ಥೆಗಳಿಂದ ಪುಸ್ತಕಗಳಿಗೆ ಬೇಡಿಕೆ ಬಂದಲ್ಲಿ ತಪ್ಪದೆ ಪುಸ್ತಕಗಳನ್ನು ಸಾಹಿತ್ಯ ಪರಿಷತ್ತಿನ ವತಿಯಿಂದ ರಿಯಾಯಿತಿ ದರದಲ್ಲಿ ಒದಗಿಸುತ್ತಿದ್ದರು.

ತಾಲ್ಲೂಕಿನ ಯಾವುದೇ ಹಳ್ಳಿಗಳಲ್ಲಿ ನಡೆಯುವ ಮದುವೆ ಸಮಾರಂಭ, ಉತ್ತರಕ್ರಿಯಾದಿ ಸಮಾರಂಭ, ಸಾವನ್ನಪ್ಪಿದಾಗ, ನಾಮಕರಣ, ಇತರೆ ಸಮಾರಂಭಗಳಿಗೆ ತಪ್ಪದೆ ಹಾಜರಾಗುತ್ತಿದ್ದರು. ಇದರಿಂದ ತಾಲ್ಲೂಕಿನ ಪ್ರತಿಯೊಬ್ಬರ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಸಿಂ.ಲಿಂ. ನಾಗರಾಜು ಅವರು ಸ್ವತಃ ಸರಳ ವಿವಾಹವಾಗಿ ಗಮನ ಸೆಳೆದಿದ್ದರು. ಮತ್ತು ಸರಳತೆಯನ್ನು ರೂಡಿಸಿಕೊಂಡಿದ್ದರು.

ಕನ್ನಡಪರ ಹೋರಾಟಗಾರ, ಶಿಕ್ಷಣಪ್ರಿಯ, ಸಹಕಾರಿ ನಾಯಕ, ಸಾಹಿತ್ಯಾಸಕ್ತರು ಆಗಿದ್ದ ಇವರು ಒಕ್ಕಲಿಗರ ಸಂಘದ ನಿರ್ದೇಶಕರಾಗಿ ಸರಳತೆ, ಸಾಮಾಜಿಕ ಕಾರ್ಯಕರ್ತನಂತೆ ಕೆಲಸ ನಿರ್ವಹಿಸುತ್ತಿದ್ದ ಸಿಂ.ಲಿಂ. ನಾಗರಾಜುರವರು ಅಸಂಖ್ಯಾತ ಅಭಿಮಾನಿಗಳನ್ನು ಹೊಂದಿದ್ದರು. ಹತ್ತಾರು ಸಂಘಗಳಲ್ಲಿ ಸಕ್ರಿಯ ಪದಾಧಿಕಾರಿಗಳಾಗಿ, ಸಮಾಜ ಸೇವೆ, ಗ್ರಾಮದ ಬಡಮಕ್ಕಳ ವಿದ್ಯಾಭ್ಯಾಸಕ್ಕಾಗಿ ಭಾರತ ವಿದ್ಯಾಸಂಘ ಕಟ್ಟಿ ಅದರ ಅಧ್ಯಕ್ಷರಾಗಿ ಇಂದಿಗೂ ಕರ್ತವ್ಯ ನಿರ್ವಹಿಸುತ್ತಿದ್ದರು.

ಶ್ರೀಯುತರು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಹಕಾರ

ಯೂನಿಯನ್ನಿಗೆ ನಿರ್ದೇಶಕರಾಗಿ ಆಯ್ಕೆಯಾಗಿ, ನಂತರದ ದಿನಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಹಕಾರ ಯೂನಿಯನ್ನಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಸದರಿಯವರ ಸೇವಾ ಅವಧಿಯಲ್ಲಿ ಯೂನಿಯನ್ನಿನ ಸದಸ್ಯತ್ವ, ಸಹಕಾರ ಸಂಘಗಳಿಗೆ ತರಬೇತಿ ಒದಗಿಸುವಲ್ಲಿ ಶ್ರಮಿಸಿರುತ್ತಾರೆ. ಸಹಕಾರ ಸಂಘಗಳಿಗೆ ಭೇಟಿ ನೀಡಿ, ಡಿ.ಸಿ.ಎಂ. ತರಬೇತಿಗೆ ಅಭ್ಯರ್ಥಿಗಳ ಮನವೊಲಿಸಿ, ಪ್ರವೇಶ ಪಡೆಯುವಂತೆ ಮನವೊಲಿಸುವಲ್ಲಿ ಯಶಸ್ವಿಯಾಗುತ್ತಿದ್ದರು. ಸಹಕಾರ ಸಪ್ತಾಹದ ಸಂದರ್ಭದಲ್ಲಿ 7 ದಿನಗಳ ಕಾಲ ವಿವಿಧ ತಾಲ್ಲೂಕುಗಳಲ್ಲಿ ಸಪ್ತಾಹ ಆಚರಣೆಯನ್ನು ಯಶಸ್ವಿಯಾಗಿ ನೆರವೇರಿಸುತ್ತಿದ್ದರು. ಸಹಕಾರಿಗಳ ಬಗ್ಗೆ ಸದಾ ಜಾಗೃತರಾಗಿರುತ್ತಿದ್ದ ಇವರು ಸಹಕಾರಿಗಳ, ಸಹಕಾರ ಸಂಘಗಳ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದರು. ಮಹಾಮಂಡಳದ ಮೂಲಕ ಜಿಲ್ಲಾ ಸಹಕಾರಯೂನಿಯನ್ನಿನ ಸಹಯೋಗದೊಂದಿಗೆ ಎಲ್ಲಾ ರೀತಿಯ ಜಿಲ್ಲಾ ವಿಶೇಷ ಕಾರ್ಯಕ್ರಮಗಳು, ರಾಜ್ಯಮಟ್ಟದ ಕಾರ್ಯಕ್ರಮಗಳು, ಚರ್ಚಾ ಮತ್ತು ಪ್ರಬಂಧ ಸ್ಪರ್ಧೆ ಇನ್ನಿತರೆ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜರುಗಿಸುತ್ತಿದ್ದರು.



ರಾಮನಗರ ಪ್ರತ್ಯೇಕ ಜಿಲ್ಲೆಯಾದ ನಂತರ ಅದಕ್ಕಾಗಿ ಪ್ರತ್ಯೇಕವಾದ ಜಿಲ್ಲಾ ಸಹಕಾರ ಯೂನಿಯನ್ನಿನ ಸ್ಥಾಪಕರಲ್ಲಿ ಒಬ್ಬರಾಗಿ ಕಾರ್ಯನಿರ್ವಹಿಸಿ, ನಿರ್ದೇಶಕರಾದರು. ನಂತರ ರಾಮನಗರ ಜಿಲ್ಲಾ ಸಹಕಾರ ಯೂನಿಯನ್ನಿನ ಅಧ್ಯಕ್ಷರಾಗಿ ಆಯ್ಕೆಯಾಗಿ ಕಾರ್ಯನಿರ್ವಹಿಸಿದರು. ಹೊಸದಾಗಿ ರಚನೆಯಾದ ಯೂನಿಯನ್ನಿಗೆ ಸದಸ್ಯತ್ವವನ್ನು ಮಾಡಿಸುವಲ್ಲಿ, ಯೂನಿಯನ್ನಿಗೆ ಅಗತ್ಯವಾದ ಮೂಲಭೂತ ವ್ಯವಸ್ಥೆಗಳನ್ನು ಕಲ್ಪಿಸುವಲ್ಲಿ ಶ್ರಮಿಸಿರುತ್ತಾರೆ. ಅದೇ ರೀತಿ ಸಹಕಾರ ಶಿಕ್ಷಣ ನಿಧಿ ಸಂಗ್ರಹಣೆ, ಸಹಕಾರ ವಾರಪತ್ರಿಕೆ ಚಂದಾ ಸಂಗ್ರಹಣೆಗೆ ಯೂನಿಯನ್ನಿನ ಅಧಿಕಾರಿ ಮತ್ತು ಸಿಬ್ಬಂದಿಗಳ ಜೊತೆಗೂಡಿ ಶ್ರಮಿಸುತ್ತಿದ್ದರು.

ಹುಟ್ಟೂರಾದ ಸಿಂಗರಾಜಪುರ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ನಿರ್ದೇಶಕರಾಗಿ, ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಇವರು ಚನ್ನಪಟ್ಟಣ ತಾಲ್ಲೂಕು ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿಯೂ ಸಹ ಸೇವೆ ಸಲ್ಲಿಸಿರುತ್ತಾರೆ. ತಮ್ಮ ಸೇವಾ ಅವಧಿಯಲ್ಲಿ ರೈತರಿಗೆ ಅಗತ್ಯವಾಗಿರುವ ಎಲ್ಲಾ ರೀತಿಯ ಸೇವೆಗಳನ್ನು ಬೇಧಭಾವವಿಲ್ಲದೆ ಒದಗಿಸಿರುತ್ತಾರೆ. ರೈತರಿಗೆ ಅಗತ್ಯವಾದ ಕೃಷಿ ಸಾಲ, ಯಂತ್ರೋಪಕರಣಗಳ ಸಾಲ, ಜಾನುವಾರು ಸಾಲ, ನೀರಾವರಿಗೆ ಸಂಬಂಧಿಸಿದಂತಹ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಸಕಾಲಕ್ಕೆ ನೀಡುವಲ್ಲಿ ಶ್ರಮಿಸಿರುತ್ತಾರೆ. ಅಷ್ಟೇ ಅಲ್ಲದೆ, ರೈತರ ಮನವೊಲಿಸಿ, ಸಾಲ ಮರುಪಾವತಿ ಇರಬಹುದು ಹಾಗೂ ಸಹಕಾರ ಸಂಘಗಳ ಪ್ರಾಮುಖ್ಯತೆಯನ್ನು ಜನತೆಯಲ್ಲಿ ಮೂಡಿಸಿ, ಸದಸ್ಯತ್ವ ನೊಂದಣಿ, ಸಹಕಾರ ಸಂಘಗಳ ಸ್ಥಾಪನೆ ಹೀಗೆ ಮುಂತಾದ ಸೇವೆಗಳನ್ನು ಮಾಡಿರುವ ಸಿಂ.ಲಿಂ.ನಾಗರಾಜುರವರು ಸಹಕಾರ ಕ್ಷೇತ್ರದ ಪೂರಕ ಬೆಳವಣಿಗೆಗೆ ಸದಾ ಜನರನ್ನು ಜಾಗೃತಿ ಮಾಡುತ್ತಿದ್ದ ಅಪ್ಪಟ ಸಹಕಾರಿಗಳಾಗಿದ್ದಾರೆ. ನಾನು ರಾಮನಗರ ಜಿಲ್ಲೆಯಲ್ಲಿ ಸಹಕಾರ ಸಂಘಗಳ ಉಪನಿಬಂಧಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಸಿಂ.ಲಿಂ. ನಾಗರಾಜರವರ ಜೊತೆಗೂಡಿ ಕರ್ತವ್ಯ ನಿರ್ವಹಿಸುವ ಅವಕಾಶ ಸಿಕ್ಕಿದ್ದು ಸಹಕಾರ ಸಪ್ತಾಹದ ತರಬೇತಿ ಕಾರ್ಯಕ್ರಮಗಳಿರಬಹುದು, ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಚರ್ಚಾ ಸ್ಪರ್ಧೆ ಮತ್ತು ಪ್ರಬಂಧ ಸ್ಪಧೆ ಇರಬಹುದು, ಸಹಕಾರ ಶಿಕ್ಷಣ ನಿಧಿ ಸಂಗ್ರಹಣೆಯನ್ನು ಜೊತೆ ಜೊತೆಯಾಗಿ ಕೆಲಸ ನಿರ್ವಹಿಸಿದ್ದು, ಅದೇ ರೀತಿ ಮಹಾಮಂಡಳದ ಕಾರ್ಯದರ್ಶಿಯಾಗಿದ್ದಾಗ ಅವರು ರಾಮನಗರ ಜಿಲ್ಲಾ ಸಹಕಾರಿ ಯೂನಿಯನ್ನಿನ ಅಧ್ಯಕ್ಷರಾಗಿ ಪ್ರಗತಿ ಪರಿಶೀಲನೆ ಮತ್ತು ಸಹಕಾರ ಶಿಕ್ಷಣ ನಿಧಿ ಸಂಗ್ರಹಣೆ ಮಾಡುವುದರ ಮೂಲಕ ಸಹಕಾರ ಕ್ಷೇತ್ರ ಹಾಗೂ ಕನ್ನಡ ನಾಡು, ನುಡಿಯ ಸೇವೆಯನ್ನು ಅವರ ಜೊತೆಗೂಡಿ ಮಾಡುವ ಅವಕಾಶ ದೊರೆತಿತ್ತು. ಸಿ.ಎಂ. ನಾಗರಾಜುರವರ ಸರಳ, ಕ್ರಿಯಾಶೀಲ ವ್ಯಕ್ತಿತ್ವ ಹಾಗೂ ಅದರ ನಾಯಕತ್ವದ ಗುಣಗಳು ಸಹಕಾರ ಕ್ಷೇತ್ರದಲ್ಲಿ ಸೇವೆ ಮಾಡುವ ಸಾವಿರಾರು ಯುವಕರಿಗೆ ಸ್ಫೂರ್ತಿದಾಯಕವಾಗಿದೆ.

## ಜಿಲ್ಲಾ ಸಹಕಾರ ಯೂನಿಯನ್ನಿಗೆ ಆಯ್ಕೆ



ಹೆಚ್.ಟಿ.ನಾಗೇಶ್



ಚಾಮರಾಜು



ವೈ.ಶ್ರೀನಿವಾಸಗೌಡ

ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಆಡಳಿತಮಂಡಳಿಗೆ ಇತ್ತೀಚೆಗೆ ಚುನಾವಣೆ ನಡೆದು, ವಸತಿ ಸಹಕಾರ ಸಂಘಗಳ ಕ್ಷೇತ್ರದಿಂದ ಪತ್ತಿನ ಸಹಕಾರ ಮಹಾಮಂಡಳದ ನಿರ್ದೇಶಕರೂ ಆಗಿರುವ ಶ್ರೀ ಹೆಚ್.ಟಿ.ನಾಗೇಶ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ನಾಗಿನಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಚಾಮರಾಜು ಅವರು ಹಾಗೂ ಲೋಕಪಾವನಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾದ ಶ್ರೀ ವೈ. ಶ್ರೀನಿವಾಸಗೌಡ ಅವರುಗಳು ಚುನಾಯಿತರಾಗಿದ್ದಾರೆ.

“ಸಹಕಾರ ಶಿಕ್ಷಣ-ತರಬೇತಿಯಿಂದ ವೃತ್ತಿಪರತೆ” ಹೆಚ್ಚಳ

# ದೂರಶಿಕ್ಷಣ ಸಹಕಾರ ತರಬೇತಿಯಿಂದ ಸಹಕಾರ ಸಂಘಗಳ ಸಿಬ್ಬಂದಿಗಳಿಗೆ ಪದೋನ್ನತಿ ಪ್ರಯೋಜನ



ರಾಜ್ಯದಲ್ಲಿ ಸಹಕಾರ ಶಿಕ್ಷಣ ಮತ್ತು ತರಬೇತಿ ಮತ್ತು ಪ್ರಚಾರ ಮಾಡುವ ಉದ್ದೇಶದಿಂದ ಮೈಸೂರು ರಾಜ್ಯದ ಸಹಕಾರ ಸಂಘಗಳ ನಿಬಂಧಕರಾಗಿದ್ದ ಕೆ.ಎಚ್. ರಾಮಯ್ಯ ಅವರ ಪ್ರೋತ್ಸಾಹ – ಮಾರ್ಗದರ್ಶನದಲ್ಲಿ 1924ರಲ್ಲಿ ಮೈಸೂರು ಪ್ರೊಪಗ್ಯಾಂಡಿಸ್ಟ್ ಕೋ–ಆಪರೇಟಿವ್ ಇನ್‌ಸ್ಟಿಟ್ಯೂಟ್ ಪ್ರಾರಂಭವಾಯಿತು.

ಇದು ರಾಜ್ಯದ ಸಹಕಾರ ಅಭಿವೃದ್ಧಿಗೆ ನಿರಂತರವಾಗಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಾ ಬಂದಿದೆ. ಕಾಲ ಕಾಲಕ್ಕೆ ಸಂಸ್ಥೆಯ ಹೆಸರು ಬದಲಾಗಿತದ್ದು ಅಂತಿಮವಾಗಿ ದಿ:22.04.1987ರಂದು ರಾಜ್ಯ ಸರ್ಕಾರದ ವತಿಯಿಂದ ನಾಲ್ಕು ಸಂಸ್ಥೆಗಳನ್ನು ಒಟ್ಟುಗೂಡಿಸಿ (ಕರ್ನಾಟಕ ರಾಜ್ಯ ಸಹಕಾರ ಯೂನಿಯನ್ ಸಹಕಾರ ಹೋಮ್, ಸಹಕಾರ ಮುದ್ರಣ ಮತ್ತು ಸಹಕಾರ ಪ್ರಕಾಶನ) ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವೆಂದು ಪುನರ್ ನಾಮಕರಣ ಮಾಡಲಾಯಿತು.

ಪ್ರಸ್ತುತ ಸಹಕಾರ ಶಿಕ್ಷಣ ಮತ್ತು ತರಬೇತಿ ಮತ್ತು ಪ್ರಚಾರ ನೀಡುವುದರ ಮೂಲಕ ಮಾತೃಸಂಸ್ಥೆಯಾಗಿ ಸಹಕಾರ ಮಹಾಮಂಡಳವು ಕಾರ್ಯನಿರ್ವಹಿಸುತ್ತಿದೆ. ಸಂಘಗಳ ಸದಸ್ಯರು ಆಡಳಿತ ಮಂಡಳಿ ಸದಸ್ಯರಿಗೆ ಸದಸ್ಯ ಶಿಕ್ಷಣ ವಿಭಾಗದ ಮೂಲಕ ಹಾಗೂ ಸಹಕಾರ ಪ್ರಚಾರ ನೀಡುವ ದೃಷ್ಟಿಯಿಂದ ಸಹಕಾರ ವಾರಪತ್ರಿಕೆಯನ್ನು ಪ್ರಕಟಿಸುತ್ತಿದೆ. ಸಹಕಾರ ಸಂಘಗಳ ಸಿಬ್ಬಂದಿಗಳಿಗೆ, ಸಹಕಾರ ಇಲಾಖೆಯ ಸಿಬ್ಬಂದಿಗಳಿಗೆ, ಲೆಕ್ಕಪರಿಶೋಧನಾ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸಹಕಾರ ತರಬೇತಿ ನೀಡುವ ಸಲುವಾಗಿ 8 ಸಹಕಾರ ತರಬೇತಿ ಕೇಂದ್ರಗಳು ಬೆಂಗಳೂರು, ಮೈಸೂರು, ಮಡಿಕೇರಿ, ಮೂಡಬಿದಿರೆ, ಶಿವಮೊಗ್ಗ, ಧಾರವಾಡ, ಬೆಳಗಾವಿ ಮತ್ತು ಕಲಬುರ್ಗಿ ಇಲ್ಲಿ ಕಾರ್ಯನಿರ್ವಹಿಸುತ್ತಿವೆ.

ಸಹಕಾರ ಸಂಘಗಳ ಸಿಬ್ಬಂದಿವರ್ಗದವರಿಗೆ ಸಹಕಾರ ಇಲಾಖೆ, ಲೆಕ್ಕಪರಿಶೊಧನಾ ಸಿಬ್ಬಂದಿವರ್ಗದವರಿಗೆ ತರಬೇತಿ ನೀಡುವ ಸಲುವಾಗಿ ಮೇ 1959ರಂದು ರಾಜ್ಯ ಸರ್ಕಾರದಿಂದ ಮೈಸೂರು ರಾಜ್ಯ ಸಹಕಾರ ಯೂನಿಯನ್‌ಗೆ ವರ್ಗಾವಣೆಗೊಂಡ ದಿನದಿಂದ ಸಹಕಾರ ತರಬೇತಿಯನ್ನು ಸಹಕಾರ ಸಂಘ/ಸಂಸ್ಥೆಗಳಲ್ಲಿ ಮತ್ತು ಸಹಕಾರ ಇಲಾಖೆಯಲ್ಲಿ ಕೆಲಸ ಮಾಡುವ ಸಿಬ್ಬಂದಿಗಳಿಗೆ ಹಾಗೂ ಖಾಸಗಿ ಅಭ್ಯರ್ಥಿಗಳಿಗೂ 6 ತಿಂಗಳ ಡಿಪ್ಲೋಮೊ ತರಬೇತಿಯನ್ನು ನೀಡಿ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ.

**ಈ ತರಬೇತಿಯಲ್ಲಿ ಬೋಧಿಸುತ್ತಿರುವ ಪಠ್ಯ ವಿಷಯಗಳು**

- ಸಹಕಾರ
- ಸಹಕಾರ ಪತ್ತು ಮತ್ತು ಬ್ಯಾಂಕಿಂಗ್
- ಸಹಕಾರ ಸಂಘಗಳ ಕಾಯ್ದೆ ಅಂಶಗಳು
- ಸಹಕಾರ ಸಂಘಗಳ ನಿರ್ವಹಣೆ
- ಸಹಕಾರ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ
- ಕಂಪ್ಯೂಟರ್ ಆಪರೇಷನ್

ಪ್ರಾರಂಭದಲ್ಲಿ ಸಹಕಾರ ತರಬೇತಿ ಕೇಂದ್ರದಲ್ಲಿ ನಡೆಸುವ ತರಬೇತಿಯನ್ನು "ಜನರಲ್ ಡಿಪ್ಲೋಮಾ ಇನ್ ಕೋ–ಆಪರೇಷನ್" (ಜಿಡಿಸಿ) ಎಂದು ಕರೆಯಲಾಗುತ್ತಿತ್ತು. ನಂತರ ಪ್ರಸ್ತುತ ಪರಿಸ್ಥಿತಿಗೆ ಅನುಗುಣವಾಗಿ ಸಂಸ್ಥೆಯ ಹೆಸರನ್ನು 2017ರಲ್ಲಿ "ಜನರಲ್ ಡಿಪ್ಲೊಮಾ ಇನ್ ಕೋ–ಆಪರೇಷನ್ (ಜಿಡಿಸಿ)" ಎಂದು ನಂತರ ಈ ತರಬೇತಿಯನ್ನು "ಡಿಪ್ಲೊಮಾ ಇನ್ ಕೋ ಆಪರೇಟಿವ್ ಮ್ಯಾನೇಜ್ ಮೆಂಟ್ (ಡಿಸಿಎಂ)" ಎಂದು ಬದಲಾಯಿಸಲಾಯಿತು ಹಾಗೂ ಕ್ರಮೇಣ ಸಹಕಾರ ತರಬೇತಿ ಕೇಂದ್ರಗಳನ್ನು "ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್" ಎಂದು ಹೆಸರು ಬದಲಾವಣೆ ಮಾಡಲಾಯಿತು.





**ಮಹಾಮಂಡಳದ ಕೆ.ಐ.ಸಿ.ಎಂ ತರಬೇತಿ ಕೇಂದ್ರಗಳು ಉತ್ತಮ ಮೂಲಭೂತ ಸೌಕರ್ಯಗಳನ್ನು ಹಾಗೂ ತರಗತಿಯಲ್ಲಿ ಆಧುನಿಕ ವಿಧಾನವನ್ನು ಅಳವಡಿಸಿಕೊಂಡು ಎಲ್.ಸಿ.ಡಿ ಪ್ರೊಜೆಕ್ಟರ್ ಮೂಲಕ ಉಪನ್ಯಾಸ ನೀಡಲಾಗುತ್ತಿದೆ ಹಾಗೂ ಕಂಪ್ಯೂಟರ್ ಲ್ಯಾಬ್ ಮತ್ತು ಗ್ರಂಥಾಲಯದಲ್ಲಿ ಸೌಲಭ್ಯವು ಇರುತ್ತದೆ ಹಾಗೂ ಪ್ರತಿವಾರ ಸಹಕಾರ ವಿಷಯದ ಕುರಿತು ಚರ್ಚಾಸ್ಪರ್ಧೆಯನ್ನು ಏರ್ಪಡಿಸುವ ಮೂಲಕ ಅಭ್ಯರ್ಥಿಗಳಿಗೆ ವ್ಯಕ್ತಿ ವಿಕಸನ ಅಭಿವೃದ್ಧಿಯಾಗಿಸಲು ಸಾಧ್ಯವಾಗುತ್ತದೆ. ತರಬೇತಿ ಸಂಸ್ಥೆಗಳಲ್ಲಿ ಜುಲೈ–2018ರಿಂದ ಸಹಕಾರ ಸಂಘಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರಿಗೆ ಇತ್ತೀಚಿನ ಕೆ.ಸಿ.ಎಸ್ ಕಾಯಿದೆ ನಿಯಮ 17(ಎ) (ಬಿ) ಪ್ರಕಾರ ಪದೋನ್ನತಿ ಹೊಂದಬೇಕಾದರೆ ಕಡ್ಡಾಯವಾಗಿ ಡಿಪ್ಲೋಮಾ ಇನ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿ ಪಡೆಯಬೇಕಾಗಿರುತ್ತದೆ. ಆದುದರಿಂದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಸಹಕಾರ ಸಂಘ/ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಸಿಬ್ಬಂದಿಗಳಿಗೆ 6 ತಿಂಗಳ ಅವಧಿಯ "ದೂರಶಿಕ್ಷಣ ಡಿಸಿಎಂ ತರಬೇತಿ"ಯನ್ನು ಸಹ ಪ್ರಾರಂಭಿಸಲಾಗಿರುತ್ತದೆ. ಈ ತರಬೇತಿ ಪಡೆಯುವ ಸಿಬ್ಬಂದಿಗಳು ತನ್ನ ಕಛೇರಿ ಕೆಲಸಕಾರ್ಯಗಳಿಗೆ ತೊಂದರೆಯಾಗದಂತೆ ಈ ತರಬೇತಿಯನ್ನು ಪಡೆಯಬಹುದಾಗಿದೆ.**

ಸಾಮಾನ್ಯ ಅಭ್ಯರ್ಥಿಗಳಿಗೆ ಮಾಹೆಯಾನ ರೂ.500/– ಮತ್ತು ವಿಶೇಷ ಯೋಜನೆಯಡಿಯಲ್ಲಿ ನಿರುದ್ಯೋಗಿ ಎಸ್.ಸಿ/ಎಸ್.ಟಿ ಅಭ್ಯರ್ಥಿಗಳಿಗೆ ರೂ.600/–ನ್ನು ಶಿಷ್ಯವೇತನವಾಗಿ ನೀಡಲಾಗುವುದು. ತರಬೇತಿ ಅವಧಿಯು 6 ತಿಂಗಳಾಗಿದ್ದು ವರ್ಷದಲ್ಲಿ ಅಂದರೆ, ಜನವರಿ – ಜೂನ್ ಹಾಗೂ ಜುಲೈ – ಡಿಸೆಂಬರ್ ಎರಡು ಅಧಿವೇಶನಗಳನ್ನು ನಡೆಸಲಾಗುತ್ತದೆ.

ಮಹಾಮಂಡಳದ ಕೆ.ಐ.ಸಿ.ಎಂ ತರಬೇತಿ ಕೇಂದ್ರಗಳು ಉತ್ತಮ ಮೂಲಭೂತ ಸೌಕರ್ಯಗಳನ್ನು ಹಾಗೂ ತರಗತಿಯಲ್ಲಿ ಆಧುನಿಕ ವಿಧಾನವನ್ನು ಅಳವಡಿಸಿಕೊಂಡು ಎಲ್.ಸಿ.ಡಿ ಪ್ರೊಜೆಕ್ಟರ್ ಮೂಲಕ ಉಪನ್ಯಾಸ ನೀಡಲಾಗುತ್ತಿದೆ ಹಾಗೂ ಕಂಪ್ಯೂಟರ್ ಲ್ಯಾಬ್ ಮತ್ತು ಗ್ರಂಥಾಲಯದಲ್ಲಿ ಸೌಲಭ್ಯವು ಇರುತ್ತದೆ ಹಾಗೂ ಪ್ರತಿವಾರ ಸಹಕಾರ ವಿಷಯದ ಕುರಿತು ಚರ್ಚಾಸ್ಪರ್ಧೆಯನ್ನು ಏರ್ಪಡಿಸುವ ಮೂಲಕ ಅಭ್ಯರ್ಥಿಗಳಿಗೆ ವ್ಯಕ್ತಿ ವಿಕಸನ ಅಭಿವೃದ್ಧಿಯಾಗಿಸಲು ಸಾಧ್ಯವಾಗುತ್ತದೆ.

ತರಬೇತಿ ಸಂಸ್ಥೆಗಳಲ್ಲಿ ಜುಲೈ–2018ರಿಂದ ಸಹಕಾರ ಸಂಘಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರಿಗೆ ಇತ್ತೀಚಿನ ಕೆ.ಸಿ.ಎಸ್ ಕಾಯಿದೆ ನಿಯಮ 17(ಎ) (ಬಿ) ಪ್ರಕಾರ ಪದೋನ್ನತಿ ಹೊಂದಬೇಕಾದರೆ ಕಡ್ಡಾಯವಾಗಿ ಡಿಪ್ಲೋಮಾ ಇನ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿ ಪಡೆಯಬೇಕಾಗಿರುತ್ತದೆ. ಆದುದರಿಂದ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಸಹಕಾರ ಸಂಘ/ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಸಿಬ್ಬಂದಿಗಳಿಗೆ 6 ತಿಂಗಳ ಅವಧಿಯ "ದೂರಶಿಕ್ಷಣ ಡಿಸಿಎಂ ತರಬೇತಿ" ಯನ್ನು ಸಹ ಪ್ರಾರಂಭಿಸಲಾಗಿರುತ್ತದೆ. ಈ ತರಬೇತಿ ಪಡೆಯುವ ಸಿಬ್ಬಂದಿಗಳು ತನ್ನ ಕಛೇರಿ ಕೆಲಸಕಾರ್ಯಗಳಿಗೆ ತೊಂದರೆಯಾಗದಂತೆ ಈ ತರಬೇತಿಯನ್ನು ಪಡೆಯಬಹುದಾಗಿದೆ. ಇದುವರೆವಿಗೂ ಸಹ ಸುಮಾರು 7000ಕ್ಕೂ ಅಧಿಕ ಅಭ್ಯರ್ಥಿಗಳು ತರಬೇತಿ ಪಡೆದು ಪದೋನ್ನತಿಯನ್ನು ಪಡೆದಿರುತ್ತಾರೆ.

ಈ ತರಬೇತಿ ಪಡೆಯುವ ಪ್ರತಿ ಅಭ್ಯರ್ಥಿಯು ಸಹಕಾರ ಸಂಘ/ಯಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಲು ವೃತ್ತಿ ಕೌಶಲ್ಯ, ಸಹಕಾರ ಕ್ಷೇತ್ರದ ಬಗ್ಗೆ ಹೆಚ್ಚಿನ ಜ್ಞಾನವನ್ನು ಪಡೆಯಲು ಅನುಕೂಲವಾಗುತ್ತದೆ.

ಪತ್ತಿನ ಸಹಕಾರ ಸಂಘಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಸಹಕಾರ ಮಹಾಮಂಡಳದ ಎಂಟು ಸಹಕಾರ ತರಬೇತಿ ಕೇಂದ್ರಗಳಲ್ಲಿ ದೂರಶೀಕ್ಷಣ ಪ್ರವೇಶ ಪಡೆಯಬಹುದಾಗಿದ್ದು ಕನಿಷ್ಠ ವಿದ್ಯಾರ್ಹತೆ 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.

ಇದರ ಸೌಲಭ್ಯಗಳನ್ನು ಪಡೆಯುವಂತೆ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಸಂಘಗಳಲ್ಲಿ ಮನವಿ ಮಾಡಿ ಸಂಬಂಧಪಟ್ಟ ಆಡಳಿತಮಂಡಳಿಗಳು ಸಿಬ್ಬಂದಿಗಳನ್ನು ದೂರಶಿಕ್ಷಣ ತರಬೇತಿಗೆ ನಿಯೋಜಿಸುವುದರಿಂದ ಸಂಘದ ಪ್ರಗತಿಯ ಜೊತೆಗೆ ಸಿಬ್ಬಂದಿಗಳಲ್ಲಿ ವೃತ್ತಿಪರತೆ – ಬದ್ಧತೆ – ದಕ್ಷತೆ ಹಾಗೂ ಪಾರದರ್ಶಕ ಆಡಳಿತವನ್ನು ತರಲು ಸಾಧ್ಯವಿದೆ.

**▶▶ ಪುಟ್ಟಸ್ವಾಮಿ,**

**ಪ್ರಾಂಶುಪಾಲರು, ಬೆಂಗಳೂರು, ಕೆ.ಐ.ಸಿ.ಎಂ.**



# ಸಹಕಾರ ಮಾರ್ಗದರ್ಶಿ :
# ಆಧುನಿಕ ಸಹಕಾರ ಚಳುವಳಿಯ ಉಗಮ

▸▸ **ಬಸವೇಗೌಡ,** ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು.

.... ಹಿಂದಿನ ಸಂಚಿಕೆಯಿಂದ

ಪ್ರತಿ ಕುಟುಂಬದಲ್ಲಿ ಕನಿಷ್ಠ ಒಬ್ಬರಿಗಾದರೂ ಒಂದು ಬ್ಯಾಂಕ್ ಖಾತೆ ತೆರೆಯುವುದು ಮೊದಲನೆಯ ಕೆಲಸ. ಗ್ರಾಹಕನ ಗುರುತು, ವಿಳಾಸ ಇವುಗಳಿಗೆ ಸಂಬಂಧಿಸಿದ KYC ನಿಯಮಗಳನ್ನು ಕೊಂಚ ಸಡಿಲಗೊಳಿಸಿ ಸುಲಭವಾಗಿ ಖಾತೆಗಳನ್ನು ತೆರೆಯಲು ಅವಕಾಶ ಮಾಡಿಕೊಡಲಾಗಿದೆ. ಕನಿಷ್ಠ ಅಗತ್ಯಗಳಿಗೆ ಸಣ್ಣ ಮೊತ್ತದ ಸಾಲಗಳಾದರೂ ಎಲ್ಲರಿಗೂ ಲಭ್ಯವಾಗಬೇಕು. ಜಾಣ ಕಾರ್ಡುಗಳ (ಸ್ಮಾರ್ಟ್ ಕಾರ್ಡ್ಸ್) ನೆರವಿನಿಂದ ಸಂಕೇತಪದ ಮುಂತಾದವುಗಳ ಗೋಜಿಲ್ಲದೆ ಗ್ರಾಹಕರ ಬೆರಳಚ್ಚು ಗುರುತು ಮೂಲಕ ತಾನಿರುವ ಗ್ರಾಮದಲ್ಲೇ ಹಣ ಪಡೆಯುವಂತಾಗಬೇಕು. ಈ ನಿಟ್ಟಿನಲ್ಲಿ ತಂತ್ರಜ್ಞಾನದ ಬಳಕೆ ಆರಂಭವಾಗಿದೆ. ಕೃಷಿ, ಸ್ವಯಂ ಉದ್ಯೋಗ ಮುಂತಾದ ಚಟುವಟಿಕೆಗಳಿಗೆ ಸಾಲಗಳು, ಜೀವ ವಿಮೆ, ಆಸ್ತಿಗಳ ವಿಮೆ/ ಆರೋಗ್ಯ ವಿಮೆ, ವೃದ್ಧಾಪ್ಯವೇತನ ಮುಂತಾದ ಇತರ ಹಣಕಾಸು ಸೌಲಭ್ಯಗಳೂ ಬ್ಯಾಂಕುಗಳ ಮೂಲಕ ದೊರೆಯುವಂತಾಬೇಕೆಂಬುದು ಈ ಕಾರ್ಯಕ್ರಮದ ಗುರಿ.

ಪುಟ್ಟ ಹಳ್ಳಿಗಳಲ್ಲಿ ಅತಿಸಣ್ಣ ಶಾಖೆಗಳನ್ನು ತೆರೆಯುವುದು, ಸರಕಾರದ ನಾನಾ ರೀತಿಯ ಸಾಲ/ ಸಹಾಯಧನ ಯೋಜನೆಗಳು, ಬ್ಯಾಂಕ್ ಪ್ರತಿನಿಧಿಗಳ [ಕರೆಸ್ಪಾಂಡೆಂಟ್ಸ್] ಮೂಲಕ ಸೇವೆ, ವಹಿವಾಟುಗಳನ್ನು ನಡೆಸಲು ಪುಟ್ಟ ವಿದ್ಯುನ್ಮಾನ ಉಪಕರಣಗಳು [Hand held terminals], ಸ್ವಸಹಾಯ ಸಂಘಗಳಿಗೆ [SHGs], ಜಂಟಿ ಹೊಣೆಗಾರಿಕೆ ಗುಂಪುಗಳಿಗೆ [Joint Liability Groups] ನೇರವಾಗಿ ಮತ್ತು ಸರಕಾರೇತರ ಸಂಸ್ಥೆಗಳ [NGOs] ಮೂಲಕ ಹೆಚ್ಚಿನ ಪ್ರಮಾಣದ ಸಾಲ ನೀಡಿಕೆ, ಮುಂತಾದ ಕಾರ್ಯಕ್ರಮಗಳಿಂದ 'ಆರ್ಥಿಕ ಸೇರ್ಪಡೆ' ಕಾರ್ಯಕ್ರಮವು ಹೆಜ್ಜೆಯಿಡಲಾರಂಭಿಸಿದೆ.

ಭಾರತದ ಜನಸಂಖ್ಯೆ ಮಿತಿಮೀರಿದ್ದು, ಬ್ಯಾಂಕುಗಳ ಹಣಕಾಸು ಮತ್ತು ಮಾನವ ಸಂಪನ್ಮೂಲಗಳು ಸೀಮಿತವಾಗಿರುವುದರಿಂದ 'ಆರ್ಥಿಕ ಸೇರ್ಪಡೆ' ಪರಿಕಲ್ಪನೆಯನ್ನು ಜಾರಿಗೊಳಿಸುವ ಕಾರ್ಯ ಒಂದು ಭಗೀರಥ ಯತ್ನ. ಹಣಕಾಸು ನಿರ್ವಹಣೆ ಕುರಿತು ಎಲ್ಲ ವರ್ಗದ ಜನರಲ್ಲಿ ಅರಿವು ಮೂಡಿಸುವ ದೃಷ್ಟಿಯಿಂದ ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ 'ಹಣಕಾಸು ಸಾಕ್ಷರತೆ ಮತ್ತು ಉದರಿ ಸಲಹಾ ಕೇಂದ್ರ' ಗಳನ್ನು ಸ್ಥಾಪಿಸಲಾಗಿದೆ. ಗ್ರಾಮೀಣ ಪ್ರದೇಶಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ. ಇಂಥ ಸಲಹಾ ಕೇಂದ್ರಗಳು ತಾಲ್ಲೂಕು ಕೇಂದ್ರಗಳಲ್ಲಿವೆ ಮತ್ತು ಇನ್ನೂ ಕೆಳಹಂತಗಳಲ್ಲೂ ಆರಂಭವಾಗತೊಡಗಿವೆ.

**ಮೊಬೈಲ್ ಬ್ಯಾಂಕಿಂಗ್ :** ಇದು ಮೊಬೈಲ್ ಯುಗವಾದ್ದರಿಂದ ಅದನ್ನುಳಿದು ಬ್ಯಾಂಕಿಂಗ್ ವ್ಯವಹಾರಗಳನ್ನೂ ಕಲ್ಪಿಸಿಕೊಳ್ಳುವುದು ಕಷ್ಟವಾದೀತು! ಸರಳವಾಗಿ ಹೇಳಬಹುದಾದರೆ ಮೊಬೈಲ್ ಫೋನುಗಳ ಮೂಲಕ ಕೆಲವು ಬ್ಯಾಂಕಿಂಗ್ ಸೇವೆಗಳನ್ನು ನೀಡುವುದೇ ಮೊಬೈಲ್ ಬ್ಯಾಂಕಿಂಗ್. ಈ ಸೇವೆಗಳು ಚುಟುಕು ಸಂದೇಶಗಳು [sms] ಅಥವಾ ಮೊಬೈಲ್ ಅಂತರ್ಜಾಲ ಆಧಾರಿತವಾಗಿರಬಹುದು. ಮೊಬೈಲ್ ಬಳಕೆದಾರರ ಸಂಖ್ಯೆ ಅಗಾಧವಾಗಿ ಹೆಚ್ಚಿರುವುದರಿಂದ ತಮ್ಮ ಸೇವೆಗಳನ್ನು ಗ್ರಾಹಕರಿಗೆ ಒದಗಿಸಲು ಮೊಬೈಲ್ ಫೋನುಗಳನ್ನು ಪರ್ಯಾಯ ಮಾರ್ಗವಾಗಿ [alternate channel] ಬಳಸಿಕೊಳ್ಳಲು ಬ್ಯಾಂಕುಗಳು ಮುಂದಾಗಿವೆ. ಗ್ರಾಹಕರು ತಮ್ಮ ಖಾತೆಯಲ್ಲಿನ ಶಿಲ್ಕು ವಿಚಾರಣೆ, ಚೆಕ್ಕುಗಳ ಪಾವತಿ ತಡೆ ಆದೇಶ ನೀಡಿಕೆ, ಖಾತೆಗಳಲ್ಲಿನ ವಹಿವಾಟುಗಳನ್ನು ತಿಳಿಯಲು, ಹತ್ತಿರದ ಎ.ಟಿ.ಎಂ./ಶಾಖೆಯ ವಿಳಾಸ ಮುಂತಾದವನ್ನು ತಿಳಿಯಲು ಅನುಕೂಲವಾಗುವಂತೆ ಮಾಹಿತಿ ಆಧಾರಿತ ಸೇವೆಗಳನ್ನು ಮೊಬೈಲ್ ಬ್ಯಾಂಕಿಂಗ್ ಮೂಲಕ ಬ್ಯಾಂಕುಗಳು ನೀಡತೊಡಗಿವೆ. ಗ್ರಾಹಕನ ಖಾತೆಯಲ್ಲಿನ ನಡೆದ ವಹಿವಾಟನ್ನು ತಕ್ಷಣ ಮೊಬೈಲ್ ಚುಟುಕು ಸಂದೇಶದ ಮೂಲಕ ಗ್ರಾಹಕನ ಗಮನಕ್ಕೆ ತರಲಾಗುತ್ತಿದೆ; ಇವು ಎಚ್ಚರಿಕೆಯ ಸಂದೇಶಗಳು. ಅಂತರ್ಜಾಲ ಬ್ಯಾಂಕಿಂಗ್ ಮೂಲಕ ಕೆಲವು ಹಣ ವರ್ಗಾವಣೆಯ ವಹಿವಾಟು ನಡೆಸುವಾಗ ಒಮ್ಮೆ ಮಾತ್ರ ಬಳಸಬೇಕಾದ ಸಂಕೇತಪದವನ್ನು [OTP] ಮೊಬೈಲ್ ಫೋನುಗಳ ಮೂಲಕ ಸೂಚಿಸಲಾಗುತ್ತದೆ. ಕೆಲವು ಬ್ಯಾಂಕುಗಳು ಮೊದಲೇ ನೋಂದಾಯಿಸಿದ (ಅದೇ ಬ್ಯಾಂಕಿನ ಅಥವಾ ಬೇರೆ ಬ್ಯಾಂಕಿನಲ್ಲಿರುವ) ಪ್ರಾಪ್ತಿಕರ್ತರ ಖಾತೆಗಳಿಗೆ ಹಣ ವರ್ಗಾಯಿಸಲು ಸೂಚನೆಯನ್ನು ಸ್ವೀಕರಿಸುತ್ತಿವೆ.

ಮೊಬೈಲ್ ಬ್ಯಾಂಕಿಂಗ್ ವಹಿವಾಟು [mobile banking transaction] ಎಂದರೆ ಮೊಬೈಲ್ ಫೋನುಗಳನ್ನು ಬಳಸಿ ಗ್ರಾಹಕರು ತಮ್ಮ ಖಾತೆಗಳಲ್ಲಿ ನಡೆಸುವ ಜಮಾ ಅಥವಾ ಖರ್ಚು ವಹಿವಾಟು. ಬ್ಯಾಂಕ್ ಗ್ರಾಹಕರೊಬ್ಬರು ತಮ್ಮ ಬಳಿ ಇರುವ, ಯಾವುದೇ ಸಂದೇಶಜಾಲದ, ಮೊಬೈಲ್ ಫೋನು ಬಳಸಿ ತಮ್ಮ ಬ್ಯಾಂಕ್ ಖಾತೆಯಿಂದ ಅದೇ ಬ್ಯಾಂಕಿನ ಅಥವಾ ಇತರ ಬ್ಯಾಂಕಿನ ಗ್ರಾಹಕರ ಖಾತೆಗೆ ತತ್ ಕ್ಷಣದಲ್ಲೇ [real time] ಹಣ ವರ್ಗಾವಣೆ ಮಾಡುವಂತಾಗಬೇಕೆಂಬುದೇ ಮೊಬೈಲ್ ಬ್ಯಾಂಕಿಂಗ್ ವ್ಯವಸ್ಥೆಯ ದೂರದ ಉದ್ದೇಶ. ಇದಕ್ಕಾಗಿ ಮೊಬೈಲ್ ಸೇವಾ ಸಂಸ್ಥೆಗಳ ನಡುವೆ ಹಾಗೂ ಬ್ಯಾಂಕುಗಳ ನಡುವೆ ಹೊಂದಾಣಿಕೆ ಬೇಕಾಗುತ್ತದೆ; ಅನೇಕ ಬಗೆಯ ನಮೂನೆಗಳನ್ನು / ವಿಧಾನಗಳನ್ನು / ಸುರಕ್ಷತೆಯ

ಉಪಾಯಗಳನ್ನು ರೂಪಿಸಿ ಸಿದ್ಧಪಡಿಸಬೇಕಾಗುತ್ತದೆ.

**ಮೊಬೈಲ್ ಬ್ಯಾಂಕಿಂಗ್ ಸೇವೆಗಳನ್ನು ಕುರಿತು ಬ್ಯಾಂಕುಗಳಿಗೆ ರಿಸರ್ವ್ ಬ್ಯಾಂಕು ನೀಡಿರುವ ಕೆಲವು ಮಾರ್ಗದರ್ಶೀ ಸೂಚನೆಗಳು ಹೀಗಿವೆ:**

1. ಶಾಖೆಗಳನ್ನು ತೆರೆಯಲು ಪರವಾನಗಿ ಪಡೆದಿರುವ ಮತ್ತು ಭಾರತದಲ್ಲಿ ಮೇಲ್ವಿಚಾರಣೆಗೆ ಒಳಪಟ್ಟ ಮತ್ತು ಭಾರತದಲ್ಲಿ ಶಾಖೆಯನ್ನು ಹೊಂದಿರುವ ಬ್ಯಾಂಕುಗಳು ಮಾತ್ರ ಮೊಬೈಲ್ ಬ್ಯಾಂಕಿಂಗ್ ಸೇವೆಗಳನ್ನು ನೀಡಬಹುದು. ಬ್ಯಾಂಕಿನ ಗ್ರಾಹಕರಿಗೆ ಮತ್ತು/ಅಥವಾ ಎ.ಟಿ.ಎಂ. ಇಲ್ಲವೇ ಉದ್ದರಿ ಕಾರ್ಡು ಧಾರಕರಿಗೆ ಮಾತ್ರ ಈ ಸೇವೆಗಳು ಲಭ್ಯವಾಗತಕ್ಕದ್ದು; ಉಳಿದವರಿಗಲ್ಲ. ಬ್ಯಾಂಕ್ ಪ್ರತಿನಿಧಿಗಳ [bank correspondents] ಮೂಲಕವೂ ಈ ಸೇವೆ ನೀಡಬಹುದು.
2. ಭಾರತದ ಗಡಿಯಾಚೆಯಿಂದ ಅಥವಾ ಗಡಿಯಾಚೆಗೆ ಹಣ ವರ್ಗಾವಣೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಭಾರತದ ರೂಪಾಯಿಗಳಲ್ಲಿ ಮಾತ್ರ ಮೊಬೈಲ್ ಬ್ಯಾಂಕಿಂಗ್ ವ್ಯವಹಾರ.
3. ಕೋರ್ ಬ್ಯಾಂಕಿಂಗ್ ಪರಿಹಾರ [CBS] ವ್ಯವಸ್ಥೆಯನ್ನು ಜಾರಿಗೊಳಿಸಿರುವ ಬ್ಯಾಂಕುಗಳಿಗೆ ಮಾತ್ರ ಮೊಬೈಲ್ ಬ್ಯಾಂಕಿಂಗ್ ಸೇವೆಗಳನ್ನು ನೀಡಲು ಅನುಮತಿ.
4. ಬ್ಯಾಂಕುಗಳು ಹಣ ವರ್ಗಾವಣೆಗೆ ದೈನಿಕ ಮಿತಿ [daily cap] ವಿಧಿಸಬಹುದು.
5. ಗ್ರಾಹಕ ಸುರಕ್ಷತೆ ಅತಿಮುಖ್ಯ. ಮೊಬೈಲ್ ಬ್ಯಾಂಕಿಂಗಿಗೆ ಬಳಕೆಯಾಗುವ ತಂತ್ರಜ್ಞಾನವು ಸುರಕ್ಷಿತವಾಗಿರಬೇಕು; ನಿಖರತೆ ಬೇಕು ಮತ್ತು ಗೋಪ್ಯತೆ ಕಾಪಾಡಬೇಕು.
6. ದೇಶದಲ್ಲಿ ಬೇರೆಬೇರೆ ಮೊಬೈಲ್ ಸಂದೇಶಜಾಲಗಳಿವೆ (ಮೊಬೈಲ್ ನೆಟ್‌ವರ್ಕ್ಸ್) ಯಾವುದೇ ಸಂದೇಶಜಾಲದ ಮೊಬೈಲ್ ಫೋನು ಹೊಂದಿರುವ ಗ್ರಾಹಕನಿಗೂ ಮೊಬೈಲ್ ಬ್ಯಾಂಕಿಂಗ್ ಸೇವೆ ಸಿಗುವಂತೆ ಬ್ಯಾಂಕುಗಳು ಕಾಳಜಿ ವಹಿಸಬೇಕು.

**ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000**
**(INformation Technology Act, 2000)**

2000ನೇ ಇಸವಿಯಲ್ಲಿ ಭಾರತದಲ್ಲಿ ಮಾಹಿತಿ ತಂತ್ರಜ್ಞಾನ ಅಧಿನಿಯಮ (Information Technology Act) ವನ್ನು ಜಾರಿಗೆ ಬಂತು. ಈ ಅಧಿನಿಯಮಕ್ಕೆ 2008ರಲ್ಲಿ ವ್ಯಾಪಕ ತಿದ್ದುಪಡಿಗಳಾದವು.

- ವಿದ್ಯುನ್ಮಾನ ವಾಣಿಜ್ಯ (e-commece) ವಹಿವಾಟುಗಳು ಕಾಗದ ಆಧಾರಿತ ಸಂವಹನ ಮತ್ತು ಮಾಹಿತಿ ಸಂಗ್ರಹಣೆಗೆ ಪರ್ಯಾಯ ವ್ಯವಸ್ಥೆಗಳನ್ನು ಒಳಗೊಂಡಿರುತ್ತದೆ. ವಿದ್ಯುನ್ಮಾನ ಮಾಹಿತಿ ವಿನಿಮಯ ಮತ್ತು ಇತರ ವಿದ್ಯುನ್ಮಾನ ಸಂವಹನ ಮಾಧ್ಯಮಗಳ ಮೂಲಕ ನಡೆಸುವ ವಾಣಿಜ್ಯ ವಹಿವಾಟುಗಳಿಗೆ ಕಾನೂನಿನ ಮಾನ್ಯತೆಯನ್ನು ನೀಡುವುದು, ಈ ಅಧಿನಿಯಮದ ಮುಖ್ಯ ಉದ್ದೇಶಗಳಲ್ಲಿ ಸೇರಿದೆ.
- ವಿದ್ಯುನ್ಮಾನ ರೂಪದಲ್ಲಿ ದಾಖಲೆಗಳನ್ನು ಸಲ್ಲಿಸಲು ಸರಕಾರಿ ಸಂಸ್ಥೆಗಳಿಗೆ ಅನುಕೂಲ ಮಾಡಿಕೊಡುವುದು ಈ ಅಧಿನಿಯಮದ ಇನ್ನೊಂದು ಮುಖ್ಯ ಉದ್ದೇಶ.
- ಈ ಅಧಿನಿಯಮ ಜಾರಿಯಾದ ಮೇಲೆ ಭಾರತದ ದಂಡ ಸಂಹಿತೆ, ಭಾರತದ ಸಾಕ್ಷ್ಯಾಧಾರ ಅಧಿನಿಯಮ, ಬ್ಯಾಂಕರನ ಪುಸ್ತಕಗಳ ಸಾಕ್ಷ್ಯಾಧಾರ ಅಧಿನಿಯಮ, ಪರಕ್ರಾಮ್ಯ ಸಂಲೇಖಗಳ ಅಧಿನಿಯಮ (NI Act) ಮುಂತಾದವುಗಳಿಗೆ ಅಗತ್ಯವಾದ ಹಲವು ತಿದ್ದುಪಡಿಗಳನ್ನು ಮಾಡಲಾಗಿದೆ.

**ಅಧಿನಿಯಮದ ಕೆಲವು ಮುಖ್ಯಾಂಶಗಳನ್ನು ಸಂಗ್ರಹವಾಗ ಹೀಗೆ ನೀಡಬಹುದು:**

- ಅಂಕೀಯ ಸಹಿ (digital signature)ಗೆ ಕಾನೂನಿನ ಮಾನ್ಯತೆ.
- ಸರ್ಕಾರಿ ಸಂಸ್ಥೆಗಳಿಗೆ ವಿದ್ಯುನ್ಮಾನ ರೂಪದಲ್ಲಿ ದಾಖಲೆಗಳನ್ನು ಸಲ್ಲಿಸಲು ಅವಕಾಶ, ಉದಾ:ಆದಾಯ ತೆರಿಗೆ ಇಲಾಖೆಗೆ ಆದಾಯದ, ತೆರಿಗೆ ಸಂದಾಯದ ವಿವರಗಳನ್ನು ವಿದ್ಯುನ್ಮಾನ ದಾಖಲೆಯ ಮೂಲಕ ಸಲ್ಲಿಸುವುದು.
- ವಿದ್ಯನ್ಮಾನ ದಾಖಲೆಗಳಿಗೆ ಕಾನೂನಿನ ಮಾನ್ಯತೆ ಉದಾ: ಪರಕ್ರಾಮ್ಯ ಸಂಲೇಖಗಳ ಅಧಿನಿಯಮದ 6ನೇ ವಿಧಿಗೆ ತಿದ್ದುಪಡಿ ತಂದು ವಿದ್ಯುನ್ಮಾನ ಚೆಕ್ಕಿಗೆ ಕಾನೂನಿನ ಮಾನ್ಯತೆ ನೀಡಲಾಗಿದೆ.
- ಅಂತರ್ಜಲ ಅಪರಾಧಗಳು (Cyber crimes) ಮತ್ತು ಕಾನೂನು ಬಾಹಿರ ಚಟುವಟಿಕೆಗಳು (ಗಣಕ ವ್ಯವಸ್ಥೆ, ಅಂತರ್ಜಾಲ ವ್ಯವಸ್ಥೆ ಅಥವಾ ಮೊಬೈಲ್ ಫೋನುಗಳನ್ನು ಬಳಸಿ ನಡೆಸುವ ವಂಚನೆಯೇ ಮುಂತಾದ ನಾನಾ ಬಗೆಯ ಅಪರಾಧಗಳನ್ನು ಅಂತರ್ಜಾಲ ಅಪರಾಧಗಳು ಎನ್ನಲಾಗುವುದು. ಮೊಬೈಲ್ ಅಥವಾ ಅಂತರ್ಜಾಲದ ಮೂಲಕ ಸಮಾಜದ ಶಾಂತಿಯನ್ನು ಕದಡುವಂಥ ಸಂದೇಶಗಳ ರವಾನೆಯೂ ಇದರಲ್ಲಿ ಸೇರುತ್ತದೆ.
- ಅಂತರ್ಜಾಲ ಅಪರಾಧಗಳ ನ್ಯಾಯ ನಿರ್ಣಯ (Judicial dis-pension) ವ್ಯವಸ್ಥೆ.
- ಮಾಹಿತಿ ಭದ್ರತೆಗೆ ವಿಶೇಷ ಗಮನ; ವಿದ್ಯುನ್ಮಾನ ಭಯೋತ್ಪಾದನೆ (Cyber terrorism) ಮತ್ತು ಮಾಹಿತಿ ರಕ್ಷಣೆ ಕುರಿತ ಕೆಲವು ವಿಶೇಷ ವಿಧಿಗಳನ್ನು 2008ರಲ್ಲಿ ತಿದ್ದುಪಡಿಗಳ ಮೂಲಕ ಅಧಿನಿಯಮದಲ್ಲಿ ಸೇರಿಸಲಾಗಿದೆ.
- ಸೈಬರ್ ನಿಯಂತ್ರಣ ಮೇಲ್ಮನವಿ ನ್ಯಾಯಮಂಡಲಿಯ (Cyber Regulation Appellate Tribunal) ಸ್ಥಾಪನೆ.
- ವಿದ್ಯುನ್ಮಾನ ದಾಖಲೆಗಳ ಮೂಲಕ ನ್ಯಾಯಾಲಯಗಳಲ್ಲಿ ಸಾಕ್ಷಿ ಸಲ್ಲಿಸಲು ಅವಕಾಶ ಹಾಗೂ ಬ್ಯಾಂಕುಗಳು ನ್ಯಾಯಾಲಯಗಳಲ್ಲಿ ಸಾಕ್ಷಿ ಸಲ್ಲಿಸುವುದನ್ನು ಕುರಿತಂತೆ ಬ್ಯಾಂಕರನ ಪುಸ್ತಕಗಳ ಸಾಕ್ಷ್ಯ ಅಧಿನಿಯಮದಲ್ಲಿ ಸೂಕ್ತ ಮಾರ್ಪಾಡು.
- ವಿದ್ಯುನ್ಮಾನ ದಾಖಲೆಗಳನ್ನು ಕಾಯ್ದಿರಿಸಿಕೊಳ್ಳಬೇಕಾದ ವಿಧಾನ, ಅವಧಿ ಮುಂತಾದವನ್ನು ಕುರಿತ ಕಟ್ಟುಪಾಡು.

ಮುಂದುವರೆಯುವುದು...